ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 7 ಫೆಬ್ರವರಿ 13, 1983 ಬೆಲೆ 60 ಪೈಸೆ

ಸಂಪಾದಕೀಯ

ಅಕ್ಕಿ ಪೂರೈಕೆಗಾಗಿ ಎಂ.ಜಿ.ಆರ್. ಉಪವಾಸ

ತಮಿಳುನಾಡಿನಲ್ಲಿ ಅಕ್ಕಿಯ ಅಭಾವವುಂಟಾಗಿದ್ದು ಅದನ್ನು ತುಂಬಿ ಕೊಳ್ಳಲು ಕೇಂದ್ರ ಸರಕಾರ ನಿರಾಕರಿಸುತ್ತಿರುವುದನ್ನು ಪ್ರತಿಭಟಿಸಿ ತಮಿಳುನಾಡಿನ ಮುಖ್ಯ ಮಂತ್ರಿ ಎಂ. ಜಿ. ರಾಮಚಂದ್ರನ್ ಅವರು ಏಳು ಗಂಟೆಗಳ ಕಾಲ ಉಪವಾಸ ಕೈಗೊಂಡಿದ್ದರು. ತಮಿಳುನಾಡಿನಲ್ಲಿ ಎ. ಐ. ಡಿ. ಎಂ. ಕೆ. ಅಧಿಕಾರಕ್ಕೆ ಬಂದು 10 ವರ್ಷಗಳ ನಂತರ ಈ ಘಟನೆ ನಡೆದಿರುವುದು ಎಲ್ಲರ ಗಮನ ಸೆಳೆದಿದೆ.

ಅಕ್ಕಿ ನೀಡಿಕೆ ಬಗ್ಗೆ ಕೇಂದ್ರ ತಳೆದಿರುವ ಮನೋಭಾವವು ರಾಷ್ಟ್ರದ ಭಾವೈಕ್ಯಕ್ಕೆ ನೆರವಾಗುವುದಿಲ್ಲೆಂಬ ಅಭಿಪ್ರಾಯವನ್ನು ಮುಖ್ಯ ಮಂತ್ರಿಯವರು ತಳೆದಿದ್ದಾರೆ. ಹಲವಾರು ತರದಲ್ಲಿ ಕೇಂದ್ರ ಸರಕಾರ ರಾಜ್ಯ ಸರಕಾರಗಳ ಹಕ್ಕುಗಳನ್ನು ಮೊಟಕುಗೊಳಿಸುತ್ತಿದೆ, ಆರ್ಥಿಕವಾಗಿಯೂ, ಅನ್ಯಾಯವೆಸಗುತ್ತಿದೆ, ಕಾರಣ ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳಲ್ಲಿ ಮೂಲಭೂತ ಬದಲಾವಣೆಗಳಾಗಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ವಾದಿಸುತ್ತಲೇ ಬಂದಿದೆ. ವಿರೋಧ ಪಕ್ಷಗಳಿಂದ ಆಳಲ್ಪಡುವ ರಾಜ್ಯ ಸರಕಾರಗಳಷ್ಟೇ ಅಲ್ಲ ಕೆಲವು ವರ್ಷಗಳ ಹಿಂದೆ ಕರ್ನಾಟಕ ರಾಜ್ಯದ ಕಾಂಗ್ರೆ ಪಕ್ಷದ ಮುಖ್ಯ ಮಂತ್ರಿಯಾಗಿದ್ದ ಡಿ. ದೇವರಾಜ ಅರಸರು ಕೂಡ ಸಿ. ಪಿ. ಐ.(ಎಂ)ನ ಈ ವಾದವನ್ನು ಒಪ್ಪಿಕೊಂಡು ಇತರ ಕಾಂಗ್ರೆ ವಿರೋಧ ಪಕ್ಷಗಳ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಚರ್ಚೆಮಾಡಿ ಕೇಂದ್ರಕ್ಕೆ ಮನವಿಯನ್ನು ಸಲ್ಲಿಸಿದ್ದರು. ರಾಜಕೀಯ ಕಾರಣದಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಎಂ. ಜಿ. ರಾಮಚಂದ್ರನ್ ಅವರು ಇಂದಿರಾ ಗಾಂಧಿಯ ಕೇಂದ್ರ ಸರಕಾರಕ್ಕೆ ಪೂರ್ಣ ಬೆಂಬಲ ತೋರಿಸುತ್ತ ಬಂದಿದ್ದರು. ಆದರೆ ಕೇಂದ್ರ ಸರಕಾರದ ನೀತಿಯ ನಿಜ ಬಣ್ಣ ಕಂಡು ಕೊಳ್ಳಲು ಎಂ. ಜಿ. ಆರ್. ಅವರಿಗೆ ಹತ್ತು ವರ್ಷ ಹಿಡಿಯಿತು.

ಸಿ. ಪಿ. ಐ. (ಎಂ) ನೇತೃತ್ವದ ಪಶ್ಚಿಮ ಬಂಗಾಲದ ಎಡರಂಗ ಸರಕಾರಕ್ಕೆ ಕೇಂದ್ರ ಸರಕಾರವು, ಬರಗಾಲ ಪರಿಹಾರಕ್ಕೆ, ನೆರೆ ಪೀಡಿತರಿಗೆ ಸಹಾಯ ನೀಡಲು, ಕೂಲಿಗಾಗಿ ಕಾಳು ಯೋಜನೆ ಯಶಸ್ವಿಗೊಳಿಸಲು ಹಾಗೆಯೇ ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಮಂಜೂರಾತಿ ನೀಡಲು ನಿರಾಕರಿಸುತ್ತ ಬಂದಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳ ಸಂಬಂಧದಲ್ಲಿ ತೀವ್ರ ಬದಲಾವಣೆಯಾಗದೆ ರಾಜ್ಯಗಳ ಜನತೆಗೆ ನ್ಯಾಯ ಸಿಗಲು ಸಾಧ್ಯವಿಲ್ಲ.

ಬೇರೆ ಹಲವಾರು ವಿಷಯಗಳಲ್ಲಿ ಕೇಂದ್ರದಿಂದ ತಮಗೆ ಅನ್ಯಾಯವಾಗಿದ್ದರೂ ಕೂಡ ಅವುಗಳನ್ನೆಲ್ಲ ಸಂಜ್ಞೆ ಇಲ್ಲದೆ ನುಂಗುತ್ತಾ ಬಂದ ಎಂ. ಜಿ. ಆರ್. ಅಕ್ಕಿಯ ಪ್ರಶ್ನೆ ಬಂದಾಗ ನಿಜ ಪರಿಸ್ಥಿತಿಯನ್ನರಿತು ಸಿಡಿದೆದ್ದಿರುವುದು ಸ್ವಾಗತಾರ್ಹ. 7 ಗಂಟೆಯ ಪ್ರತಿಭಟನಾ ಉಪವಾಸದಿಂದಲೇ ಸಮಾಧಾನಗೊಳ್ಳದೆ, ಇತರ ರಾಜ್ಯಗಳ ಮುಖ್ಯ ಮಂತ್ರಿಗಳ ಜೊತೆ ಸೇರಿ ರಾಜ್ಯ ಸರಕಾರಗಳಿಗೆ ಹೆಚ್ಚು ಸ್ವಾಯತ್ತಾಧಿಕಾರ ಸಿಗುವಂತೆ ಹೋರಾಡಲು ಎಂ. ಜಿ. ಆರ್. ಮುಂದಾಗಲೆಂದು ಹಾರೈಸುತ್ತೇವೆ.

ಚುನಾವಣಾ ಬಹಿಷ್ಕಾರದಿಂದ ಸಮಸ್ಯೆಯ ಪರಿಹಾರ ಸಾಧ್ಯವೇ ?

ಅಸ್ಸಾಂ ಚುನಾವಣಾ ಭಾಷಣದಲ್ಲಿ ಇ. ಎಂ. ಎಸ್. ಪ್ರಶ್ನೆ

ಅಸ್ಸಾಂ ಚುನಾವಣೆಯನ್ನು ಬಹಿಷ್ಕರಿಸುವುದರಿಂದ ಸಮಸ್ಯೆಗೆ ಪರಿಹಾರ ಕಾಣಲು ಸಾಧ್ಯವಾಗುವುದಿಲ್ಲ ಚುನಾವಣೆಯನ್ನು ಮುಂದೂಡುವುದರಿಂದ ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳಿಗೇ ಸಹಾಯವಾಗುತ್ತದೆ ಎಂಬುದಾಗಿ ದಿನಾಂಕ 7 ರಂದು ಗೌಹಾತಿಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸಿ. ಪಿ. ಐ (ಎಂ)ನ ಪ್ರಧಾನ ಕಾರ್ಯದರ್ಶಿ ಕಾ| ಇ ಎಂ.ಎಸ್. ನಂಬೂದ್ರಿಪಾಡ್ ಎಚ್ಚರಿಸಿದರು.

ಪ್ರಕ್ಷುಬ್ಧ ವಾತಾವರಣ ಸೃಷ್ಟಿಸಿರುವ ಪ್ರತ್ಯೇಕತಾವಾದೀ ಶಕ್ತಿಗಳ ಸವಾಲನ್ನು ಸ್ವೀಕರಿಸುವ ರೀತಿಯಲ್ಲಿ ಅಸ್ಸಾಂನ ಆರು ಪಕ್ಷಗಳ ಎಡ–ಪ್ರಜಾಸತ್ತಾತ್ಮಕ ರಂಗವು ವ್ಯವಸ್ಥೆಗೊಳಿಸಿದ್ದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಅನೇಕ ಮುಖಂಡರುಗಳು ಭಾಷಣಮಾಡಿದರು.

ಎಡ-ಪ್ರಜಾಸತ್ತಾತ್ಮಕ ರಂಗವು ತನ್ನ ಚುನಾವಣಾ ಭಾಷಣವನ್ನು ನಡೆಸಲು ಅಡ್ಡಿಯುಂಟುಮಾಡಬೇಕೆಂಬ ಉದ್ದೇಶದಿಂದ 'ಜನತಾ ಬಂದ್' ಮುಂತಾದ ವಿಧಾನಗಳ ಮೂಲಕ ಪ್ರಯತ್ನಿಸಿದ್ದರು ಅಲ್ಲದೆ ಇನ್ನೂ ಅನೇಕ ಹಿಂಸಾಚಾರಗಳನ್ನು ನಡೆಸಿದ್ದರು.

ಆದರೂ ಸಹ ಚಳವಳಿಕಾರರಿಗೆ ಸವಾಲೆಸಗುವ ರೀತಿಯಲ್ಲಿ ಎಡ-ಪ್ರಜಾಸತ್ತಾತ್ಮಕ ರಂಗವು ಅಧಿಕ ಸಂಖ್ಯೆಯಲ್ಲಿ ಜನರನ್ನು ಸಭೆಯಲ್ಲಿ ಪಾಲ್ಗೊಳ್ಳುವಂತೆ ಸಂಘಟಿಸಿತು ಇಲ್ಲಿಯವರೆಗೂ ಚಳವಳಿಕಾರರೇ ಮೆರವಣಿಗೆ ನಡೆಸುವುದು, ಬಹಿರಂಗಸಭೆ ನಡೆಸುವುದು ಮುಂತಾದ ಕಾರ್ಯಗಳಲ್ಲಿ ತೊಡಗಿದ್ದರು.

ಆದರೆ ಪ್ರತ್ಯೇಕತಾವಾದಿಗಳ ಭಯೋತ್ಪಾದನೆಗಳನ್ನು ಮೀರಿ ಫೆಬ್ರವರಿ7ರಂದು ಗೌಹಾತಿಯಲ್ಲಿ ನಡೆದ ಬಹಿರಂಗ ಸಭೆ ಮತ್ತು ಮೆರವಣಿಗೆಗಳು ಅತ್ಯಂತ ಮಹತ್ವಪಡೆದುಕೊಂಡಿದೆ.

ಬಹಿರಂಗ ಸಭೆಯಲ್ಲಿ ಸಿ. ಪಿ. ಐ ನಾಯಕರಾದ ಕಾ. ಇಂದ್ರಜಿತ್ ಗುಪ್ತ ಹಾಗೂ ರಂಗದ ಇತರ ಪಕ್ಷಗಳ ನಾಯಕರು ಭಾಷಣ ಮಾಡಿದರು.

ಪೊಲಿಟ್‌ಬ್ಯೂರೋ ಹೇಳಿಕೆ :

ದೆಹಲಿ ಫಲಿತಾಂಶ ಕುರಿತು

ದೆಹಲಿ ಮೆಟ್ರೋಪಾಲಿಟನ್ ಕೌನ್ಸಿಲ್ ಮತ್ತು ಕಾರ್ಪೊರೇಷನ್ ಚುನಾವಣೆಗಳ ಫಲಿತಾಂಶಗಳು ನಿರೀಕ್ಷೆಗೆ ವಿರುದ್ಧವಾಗಿ ನಡೆದಿದೆ. ತ್ರಿಪುರಾ, ಆಂಧ್ರ ಪ್ರದೇಶ ಮತ್ತು ಕರ್ನಾಟಕಗಳಲ್ಲಿ ಕಾಂಗ್ರೆಸ್ (ಐ) ಅನುಭವಿಸಿದ ಸೋಲನ್ನು ದೆಹಲಿಯಲ್ಲೂ ಅನುಭವಿಸಲಿದೆಯೆಂಬುದಾಗಿ ಜನತೆ ನಂಬಿದ್ದರು ಆದರೆ ದೆಹಲಿ ಮತದಾರರು ಬೇರೆ ರೀತಿಯಲ್ಲೇ ತೀರ್ಮಾನಿಸಿದರು ಕಾಂಗ್ರೆಸ್ (ಐ) ದೆಹಲಿಯಲ್ಲಿ ನಡೆದ ಎರಡೂ ಚುನಾವಣೆಗಳಲ್ಲೂ ಬಹುಮತ ಪಡೆದು ಜಯಗಳಿಸಿದೆ. ದೆಹಲಿಯಲ್ಲಿ ಕಾನೂನು ಮತ್ತು ಶಿಸ್ತುಪಾಲನೆ ಮುರಿದು ಬಿದ್ದಿರುವ ಸ್ಥಿತಿಯಲ್ಲಿ, ಆಡಳಿತದಲ್ಲಿ ತುಂಬಿ ತುಳುಕುತ್ತಿರು ಭ್ರಷ್ಟಾಚಾರ ಮತ್ತು ಬೆಲೆ ಏರಿಕೆಯಿಂದಾಗಿ ಜನಸಾಮಾನ್ಯರ ಜೀವನ ಅಸಹನೀಯಗೊಳ್ಳುತ್ತಿರುವ ಇಂಥಾ ಸಂದರ್ಭದಲ್ಲಿ ಇದು ಸಂಭವಿಸಿದೆ. ಜನತೆಯು ನೀಡಿರುವ ಮತ ಖಂಡಿತವಾಗಿಯೂ ಕಾಂಗ್ರೆಸ್ (ಐ) ಧೋರಣೆಗಳನ್ನು ಬೆಂಬಲಿಸುವ ಮತವಲ್ಲ.

ಜನತೆಯು ತಮ್ಮ ಅತೃಪ್ತಿಯನ್ನು ಹೊರಗೆಡಹಲು ಸೂಕ್ತವಾದ ಪರ್ಯಾಯ ಪಕ್ಷ ಇಲ್ಲದೇ ಇರುವಂತಹ ಪರಿಸ್ಥಿತಿಯನ್ನು ಕಾಂಗ್ರೆಸ್ (ಐ) ಉಪಯೋಗಿಸಿಕೊಂಡಿದೆ ಎಡ ಪಕ್ಷಗಳಾಗಲೀ ಅಥವ ಆತುರಾತುರವಾಗಿ ರಚನೆಯಾದ ನಾಲ್ಕು ಪಕ್ಷಗಳ ಸಂಯೋಜನೆಯಾಗಲೀ ಕಾಂಗ್ರೆಸ್ (ಐ) ಅನ್ನು ಎದುರಿಸುವಲ್ಲಿ ಬಲಹೀನಗೊಂಡಿದೆ ಎಂಬುದು ರುಜುವಾತಾಗಿದೆ. ತನ್ನನ್ನು ತಾನೇ ಪರ್ಯಾಯವೆಂದು ಘೋಷಿಸಿಕೊಂಡಿರುವ ಬಿ. ಜೆ ಪಿಯು ಕಾಂಗ್ರೆಸ್(ಐ) ವಿರೋಧೀ ಅಲೆಯನ್ನು ತನ್ನ ಪರವಾಗಿ ಉಪಯೋಗಿಸಿಕೊಳ್ಳಬಹುದೆಂದು ಅದು ನಿರೀಕ್ಷಿಸಿತ್ತು. ಆದರೆ ಮೊದಲ ಎರಡೂ ಅಂಗಗಳಲ್ಲೂ ಆಡಳಿತದಲ್ಲಿದ್ದ ಬಿ ಜೆ ಪಿ. ಧೋರಣೆಗಳು ಕಾಂಗ್ರೆಸ್ (ಐ)ನ ಧೋರಣೆಗಳಿಗಿಂತ ಭಿನ್ನವಾಗೇನೂ ಕಂಡುಬರಲಿಲ್ಲ. ಕಾಂಗ್ರೆಸ್ (ಐ) ಕುರಿತಾದ ಅತೃಪ್ತಿ ಇದ್ದರೂ ಕೂಡ, ಅಲ್ಪ ಸಂಖ್ಯಾತರು ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಹಿಂದೂ ಕೋಮುವಾದಿ ದೃಷ್ಟಿಕೋನವನ್ನು ಹೊಂದಿದ್ದ, ಅದನ್ನು ಕಾರ್ಯ ಶೀಲಗೊಳಿಸುತ್ತಿದ್ದ ಪಕ್ಷಕ್ಕೆ (ಬಿ. ಜೆ ಪಿ. ಗೆ) ಮತ ನೀಡಲು ಸಿದ್ಧರಿರಲಿಲ್ಲ. ಪ್ರಮುಖ ವಿರೋಧ ಪಕ್ಷದ ಈ ದೌರ್ಬಲ್ಯಗಳಿಂದಾಗಿ ಕಾಂಗ್ರೆಸ್ (ಐ) ಲಾಭ ಪಡೆದುಕೊಂಡಿತು.

ಆದರೆ ಕಾಂಗ್ರೆಸ್ (ಐ) ಪಕ್ಷಕ್ಕೆ ದೊರೆತ ಬಹುಮತವೇ ಅದಕ್ಕೊಂದು ಹೊರೆಯಾಗಿಬಿಟ್ಟಿದೆ. ಈ ಪಕ್ಷಕ್ಕೆ ಮತ ನೀಡಿದ ಜನರೇ ಈಗ ಆರ್ಥಿಕ ತೊಂದರೆಗಳ ವಿರುದ್ಧವಾಗಿ ಮತ್ತು ಪಕ್ಷದ ಧೋರಣೆಗಳ ವಿರುದ್ಧವಾಗಿ ಕಾರ್ಯಶೀಲರಾಗುತ್ತಿದ್ದಾರೆ.

ಕಾಂಗ್ರೆಸ್ (ಐ) ಧೋರಣೆಗಳನ್ನು ಜನತೆಯು ಒಪ್ಪಿಕೊಂಡಿಲ್ಲ, ಮತ್ತು ಹೆಚ್ಚಿನ ತೆರಿಗೆಯ ಅಥವ ಭ್ರಷ್ಟಾಚಾರದ ಹೊರೆಯನ್ನು ಹೊರಲು ಜನತೆ ಇನ್ನು ಸಿದ್ಧರಿಲ್ಲ ಎಂಬುದನ್ನು ಎಡ ಶಕ್ತಿಗಳು ಅರಿತುಕೊಳ್ಳಬೇಕಾಗಿದೆ. ಕಾಂಗ್ರೆಸ್ (ಐ) ವಿರುದ್ಧದ ಅತೃಪ್ತಿ ಅಧಿಕಗೊಳ್ಳುತ್ತದೆ ಮತ್ತು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಈ ಅತೃಪ್ತಿಯನ್ನು ಉಪಯೋಗಿಸಿಕೊಂಡು ಜನತೆಯ ಹಿತವನ್ನು ರಕ್ಷಿಸಿ, ಅವರ ಏಳಿಗಾಗಿ ಹೋರಾಟ ನಡೆಸುವುದು ಒಂದು ಪ್ರಮುಖ ಕರ್ತವ್ಯವಾಗಿದೆ.

ನೆರೆ ಹೊರೆ

ದೆಹಲಿ :

ವಿ. ವಿ. ಅಧ್ಯಾಪಕರಿಗೆ ಭಾರೀ ವಿಜಯ

ದೆಹಲಿ ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಜನವರಿ 8 ಒಂದು ಹೆಮ್ಮೆಯ ದಿನವಾಗಿ ಪರಿಣಮಿಸಿದೆ. ಅವರಿಗೆ ಮಾತ್ರವಲ್ಲ ಪ್ರಜಾಪ್ರಭುತ್ವವಾದಿಗಳೆಲ್ಲರಿಗೂ ಸಂತೋಷವನ್ನುಂಟುಮಾಡಿದ ದಿನವದು. ಆ ದಿನ ದೆಹಲಿ ವಿಶ್ವವಿದ್ಯಾಲಯ ಅಧ್ಯಾಪಕರ ಸಂಘದ ನೇತೃತ್ವದಲ್ಲಿ ನಾಲ್ಕು ತಿಂಗಳಿಂದ ನಡೆಯುತ್ತಿದ್ದ ಮುಷ್ಕರ ಅಧ್ಯಾಪಕರ ವಿಜಯದೊಂದಿಗೆ ಕೊನೆಗೊಂಡಿತು. ಅಧ್ಯಾಪಕರಿಗೆ ಅವರ ಬೋಧಕ ಅನುಭವವೇ ಎಲ್ಲಕ್ಕಿಂತಲೂ ಹೆಚ್ಚು ವಸ್ತುನಿಷ್ಠವಾದ ಯೋಗ್ಯತೆ; ಇಂತಹ ಯೋಗ್ಯತೆಯನ್ನು ಇಂತಿಷ್ಟೇ ಸಂಖ್ಯೆಯೊಳಗಿರಬೇಕೆಂದು ಮಿತಿಗೊಳಿಸಲಾಗುವುದಿಲ್ಲವೆಂಬ ನೀತಿಬದ್ಧ ನಿಲುವಿನಿಂದ ಅಧ್ಯಾಪಕರು ಈ ಹೋರಾಟ ನಡೆಸುತ್ತಿದ್ದರು.

ಅನುಭವ ಹಾಗೂ ಸಂಶೋಧನಾ ಅರ್ಹತೆಯ ಆಧಾರದ ಮೇಲೆ ಎಲ್ಲಾ ಅಧ್ಯಾಪಕರಿಗೆ ಬಡ್ತಿ ನೀಡಬೇಕೆಂಬ ಬೇಡಿಕೆ ಹಾಗೂ ಇತರ ಬೇಡಿಕೆಗಳನ್ನು ಹಲವಾರು ಬಾರಿ ವಿಶ್ವವಿದ್ಯಾಲಯದ ಆಡಳಿತ ಹಾಗೂ ಯು. ಜಿ. ಸಿ. ಯ ಮುಂದಿಟ್ಟರೂ ಉಪಯೋಗವಿಲ್ಲದಾದಾಗ ಕಳೆದ ಅಕ್ಟೋಬರ್ ತಿಂಗಳಿಂದ ಅಧ್ಯಾಪಕರು ಬೇರೆ ನಿರ್ವಾಹವಿಲ್ಲದೆ ಮುಷ್ಕರ ಆರಂಭಿಸಿದರು. ಆಡಳಿತ ಆಗಲೂ ಅವರ ಬೇಡಿಕೆಗಳನ್ನು ಪರಿಶೀಲಿಸುವ ಬದಲು ಅವರನ್ನು ಬೆದರಿಸಲು ಆರಂಭಿಸಿತು. ಆದರೆ ಇಂತಹ ಬೆದರಿಕೆಗಳ ಪರಿಣಾಮ ತದ್ವಿರುದ್ಧವಾಗಿತ್ತು. ಮೊದಮೊದಲು ಮುಷ್ಕರದ ಬಗ್ಗೆ ಅಷ್ಟೊಂದು ಆಸಕ್ತಿ ತಳೆಯದ ಅಧ್ಯಾಪಕರೂ ಹೆಚ್ಚು ಹೆಚ್ಚಾಗಿ ಮುಷ್ಕರದಲ್ಲಿ ಆಸಕ್ತಿಯಿಂದ ಭಾಗವಹಿಸಲಾರಂಭಿಸಿದರು.

ಇತರ ಎಲ್ಲಾ ಆಡಳಿತ ವರ್ಗಗಳಂತೆ ಇದರಿಂದಲೂ ಅಧ್ಯಾಪಕರ ದೃಢ ನಿರ್ಧಾರವನ್ನು ಅರಿಯಲಾಗದ ವಿಶ್ವವಿದ್ಯಾಲಯ ಆಡಳಿತ ಜನವರಿ 17 ರೊಳಗೆ ಬೋಧನೆ ಆರಂಭಿಸದಿದ್ದರೆ 'ಕೆಲಸವಿಲ್ಲದಿದ್ದರೆ ವೇತನವಿಲ್ಲ' ಎಂಬ ನಿಯಮ ಅಂದರೆ ವೇತನ ಕಡಿತ ಆರಂಭಿಸುವುದಾಗಿ ಬೆದರಿಸಿತು. ಇದು ವಿಶ್ವವಿದ್ಯಾಲಯದ ಇತಿಹಾಸದಲ್ಲೇ ಹಿಂದೆ ಆಗಿರಲಿಲ್ಲ. ಆದರೆ ಇದಕ್ಕೆ ತೀರಾ ವಿರುದ್ಧವಾದ ಪ್ರತಿಕ್ರಿಯೆಯನ್ನು ಅದು ಎದುರಿಸಬೇಕಾಗಿ ಬಂತು. ಉದಾಹರಣೆಗೆ, ಮಿರಾಂಡಾ ಹೌಸ್ ಎಂಬ ಕಾಲೇಜಿನ ಅಧ್ಯಾಪಕರು ನಡುವೆ ಮುಷ್ಕರ ನಿಲ್ಲಿಸಿ ಬೋಧನೆಯ ಕೆಲಸ ಆರಂಭಿಸಿದವರು ಮತ್ತೆ ಮುಷ್ಕರಕ್ಕೆ ವಾಪಸು ಬಂದರು.

ಈ ನಡುವೆ ದೆಹಲಿ ಹೈಕೋರ್ಟ್ 'ಸಾರ್ವಜನಿಕ ಹಿತದೃಷ್ಟಿ'ಯಿಂದ ಮಧ್ಯ ಪ್ರವೇಶಿಸಿತು. ವಿಶ್ವವಿದ್ಯಾಲಯ ಆಡಳಿತ, ಯು ಜಿ ಸಿ ಹಾಗೂ ಶಿಕ್ಷಣ ಸಚಿವಾಲಯ ಹಾಗೂ ಅಧ್ಯಾಪಕರ ಸಂಘದ ವಕೀಲರುಗಳು ವಾದ-ಪ್ರತಿವಾದದಲ್ಲಿ ಭಾಗವಹಿಸಿದರು. ಮುಖ್ಯ ನ್ಯಾಯಾಧೀಶರು ಆರಂಭದಲ್ಲೇ ಅಧ್ಯಾಪಕರ ಸಂಘ ಮುಂದಿಟ್ಟ ಯೋಜನೆ ಹೆಚ್ಚು ವಸ್ತುನಿಷ್ಠ ಎಂಬುದನ್ನು ಸ್ವೀಕರಿಸಿದರು. ಅಲ್ಲದೆ ಅಧ್ಯಾಪಕರ ಮುಷ್ಕರ ಕಾನೂನುಬಾಹಿರ ಎಂಬ ವಿಶ್ವವಿದ್ಯಾಲಯದ ಆಡಳಿತದ ವಾದವನ್ನು ತಳ್ಳಿ ಹಾಕಿದರು. ಕೊನೆಗೆ ಎಲ್ಲಾ ವಕೀಲರೊಡನೆ ಸಮಾಲೋಚನೆಯ ನಂತರ ಬಡ್ತಿಯ ಬಗ್ಗೆ ಒಂದು ಒಪ್ಪಂದಕ್ಕೆ ಬಂದು ಉಳಿದ ಬೇಡಿಕೆಗಳನ್ನು ಮೂರು ತಿಂಗಳೊಳಗೆ ಪರಿಹರಿಸಿಕೊಳ್ಳಬೇಕೆಂದು ಒಪ್ಪಲಾಯಿತು.

ಈ ಒಪ್ಪಂದ ಅಧ್ಯಾಪಕರ ನಿರೀಕ್ಷೆಯ ಮಟ್ಟದಲ್ಲಿ ಇಲ್ಲದಿದ್ದರೂ ಸುಮಾರಾಗಿ ಅಧ್ಯಾಪಕರು ಇದಕ್ಕೆ ಒಪ್ಪಿದರು. ಆದರೆ ತಮ್ಮ ನಿಲುವಿನಲ್ಲಿ ಹುರುಳಿರಲಿಲ್ಲ ಎಂಬುದು ಜನಜಾಹೀರವಾದುದರಿಂದ ಕುಪಿತಗೊಂಡ ವಿಶ್ವವಿದ್ಯಾಲಯ ಆಡಳಿತ, ಯು.ಜಿ.ಸಿ., ಶಿಕ್ಷಣ ಸಚಿವಾಲಯ ಹತ್ತು ದಿನಗಳ ವಾದ-ಪ್ರತಿವಾದಗಳಲ್ಲಿ ಭಾಗವಹಿಸಿದ ನಂತರವೂ ಹೈಕೋರ್ಟಿಗೆ ಈ ವಿಷಯದಲ್ಲಿ ಮಧ್ಯ ಪ್ರವೇಶಿಸಲು ಹಕ್ಕಿಲ್ಲ ಎಂದು ಹೇಳಲಾರಂಭಿಸಿದರು. ಮುಷ್ಕರ ಮತ್ತಷ್ಟು ಪ್ರಬಲಗೊಂಡಿತು. ಕೇಂದ್ರ ವಿಶ್ವವಿದ್ಯಾಲಯಗಳ ಅಧ್ಯಾಪಕರ ಸಂಘಗಳ ಸಂಯೋಜಕ ಸಮಿತಿಯ ಕರೆಯ ಮೇರೆಗೆ ಜನವರಿ 27 ರಂದು ಎಲ್ಲಾ ಕೇಂದ್ರ ವಿಶ್ವವಿದ್ಯಾಲಯಗಳು ಒಂದು ದಿನದ ಸಾಂಕೇತಿಕ ಮುಷ್ಕರದಲ್ಲಿ ಭಾಗವಹಿಸಿದವು. ಅದೇ ದಿನ ಯು. ಜಿ. ಸಿ. ಕಚೇರಿಯ ಮುಂದೆ ದೆಹಲಿ ಅಧ್ಯಾಪಕರು ಭಾರೀ ಮತಪ್ರದರ್ಶನ ನಡೆಸಿದರು. ನೂರಾರು ವಿದ್ಯಾರ್ಥಿಗಳೂ ಇದರಲ್ಲಿ ಭಾಗವಹಿಸಿದರು. ಇದಾದ ಕೆಲವೇ ಗಂಟೆಗಳ ನಂತರ ಯು.ಜಿ.ಸಿ. ಹಾಗೂ ವಿಶ್ವವಿದ್ಯಾಲಯ ಆಡಳಿತ ತಮ್ಮೆಲ್ಲಾ ವಾದ, ನಿಲುವುಗಳನ್ನು ಮೂಲೆಗೊತ್ತಿ ಒಪ್ಪಂದಕ್ಕೆ ಬರಲೇಬೇಕಾಯಿತು. ಅಧ್ಯಾಪಕರ ನೀತಿಬದ್ಧ ಧೀರ ಹೋರಾಟಕ್ಕೆ ಕೊನೆಗೂ ಜಯ ದೊರೆಯಿತು.

ಕೇಂದ್ರ ಸರಕಾರ ಜ್ಯಾರಿಗೊಳಿಸ ಬಯಸುತ್ತಿರುವ ಆಸ್ಪತ್ರೆ ಹಾಗೂ ಇತರ ಸಂಸ್ಥೆಗಳ ಮಸೂದೆಗೆ ಇದು ಮೊದಲ ಏಟು. ಸರಕಾರ ಇದನ್ನು ಅರಿತು ಮಸೂದೆಯನ್ನು ವಾಪಸು ಪಡೆಯದಿದ್ದರೆ ದೆಹಲಿ ವಿಶ್ವವಿದ್ಯಾಲಯ ಮಾತ್ರವಲ್ಲ ಇಡೀ ದೇಶದ ಅಧ್ಯಾಪಕರು ಹೋರಾಟ ನಡೆಸಲು ತಯಾರಾಗಿದ್ದಾರೆ.

●

ಕೇರಳ :

ಎಲ್ಲಾ ವಲಯಗಳಲ್ಲಿ ಸರಕಾರ ವಿಫಲ

ಎಂಟು ತಿಂಗಳ ಹಿಂದೆ ಸರಕಾರ ರಚಿಸಿದ ಕಾಂಗ್ರೆಸ್ (ಐ) ರಂಗ ಹಲವು ಘೋಷಣೆಗಳೊಂದಿಗೆ ಅಧಿಕಾರಕ್ಕೆ ಬಂದಿತು. ಅದರಲ್ಲಿ ಮೊದಲನೆಯದು ಎಡ ಪ್ರಜಾಪ್ರಭುತ್ವ ರಂಗ ಸರಕಾರದ ಆಡಳಿತದಲ್ಲಿ ಉಲ್ಬಣಗೊಂಡಿದೆ ಎಂಬುದಾಗಿ ಅದು ಹೇಳಿಕೊಳ್ಳುತ್ತಿದ್ದ ಕಾನೂನು ವ್ಯವಸ್ಥೆ. ಆದರೆ ಈ ಸರಕಾರದ ಸಾಧನೆ ಈ ದಿಸೆಯಲ್ಲಿ ಸೊನ್ನೆ. ಹರಿಜನ, ಗಿರಿಜನರ ಮೇಲೆ ಹೆಚ್ಚುತ್ತಿರುವ ಹಲ್ಲೆ, ತ್ರಿಚೂರ್, ಇಡುಕ್ಕಿ, ಕೊಟ್ಟಾಯಂ, ಅಲೆಪ್ಪಿ, ತಿರುವನಂತಪುರಗಳ ಘಟನೆಗಳು ಇದಕ್ಕೆ ಉದಾಹರಣೆಗಳಷ್ಟೆ.

ಈಗಿನ ಆಡಳಿತರಂಗದ ಇನ್ನೊಂದು ಹೇಳಿಕೆ—ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ಆಳ್ವಿಕೆಯಿದ್ದರೆ ರಾಜ್ಯದ ಯೋಜನೆಗಳಿಗೆ ಹೆಚ್ಚು ಆರ್ಥಿಕ ನೆರವು ದೊರೆಯುತ್ತದೆಯೆಂಬುದು. ಆದರೆ ಈ ವರ್ಷದ ಯೋಜನೆಗೆ ಕಳೆದ ವರ್ಷ ನಯನಾರ್ ಸರಕಾರ ಪಡೆದುದಕ್ಕಿಂತ ಒಂದು ಪೈಸಾನೂ ಹೆಚ್ಚು ಕೇಂದ್ರ ಸಹಾಯ ಪಡೆಯಲು ಈ ಸರಕಾರಕ್ಕೆ ಆಗಿಲ್ಲ. ಕೇಂದ್ರ ಸರಕಾರದ ಆಮದು ನೀತಿಯಿಂದಾಗಿ ತೀವ್ರ ತೊಂದರೆಗೊಳಗಾದ ವಾಣಿಜ್ಯ ಬೆಳೆಗಳ ಉತ್ಪಾದಕರ ಹಿತ ರಕ್ಷಿಸುವಂತೆ ಕೇಂದ್ರ ಸರಕಾರದ ಮೇಲೆ ಒತ್ತಡ ತರಲೂ ಅದಕ್ಕಾಗಲಿಲ್ಲ.

ಸ್ಥಿರ ಸರಕಾರ ಕೊಡುತ್ತೇವೆಂಬ ಆಡಳಿತ ರಂಗದ ಇನ್ನೊಂದು ವಚನದ ಬಗ್ಗೆ ಹೇಳದಿರುವುದೇ ಒಳ್ಳೆಯದು. ಮೀಸಲಾತಿ ಕುರಿತು ಎನ್. ಡಿ. ಪಿ. ಹಾಗೂ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ನಡುವೆ ಕಲಹ, ಕೇಂದ್ರದ ವಾಣಿಜ್ಯ ಬೆಳೆ ಆಮದು ನೀತಿಯಿಂದಾಗಿ ಕೇರಳ ಕಾಂಗ್ರೆಸ್‌ಗಳು ಹಾಗೂ ಕಾಂಗ್ರೆಸ್ (ಐ) ನಡುವೆ ಕಲಹ, ಇದೇ ರೀತಿ ಇತರ ರಾಜ್ಯಗಳಲ್ಲಿ ತಳೆದ ನಿಲುವಿನಿಂದಾಗಿ ಕಾಂಗ್ರೆಸ್ (ಐ) ಹಾಗೂ ಐ.ಯು.ಎಮ್.ಎಲ್ ನಡುವೆ ಕಲಹ ಇವೆಲ್ಲಾ ದಿನ ಕಳೆದಂತೆ ತೀವ್ರವಾಗುತ್ತಿವೆ.

ಇದು ಎಂಟು ತಿಂಗಳಲ್ಲಿ ಕರುಣಾಕರನ್ ಸರಕಾರದ ಸಾಧನೆ.

ಒರಿಸ್ಸಾ :

ಸರಕಾರದ ನಿರ್ಲಕ್ಷ್ಯದ ವಿರುದ್ಧ ಕಿಸಾನ್ ಸಭಾ ಜಾಥಾ

ಅಧಿಕೃತ ವಿಶ್ಲೇಷಣೆಯ ಪ್ರಕಾರ ಒರಿಸ್ಸಾದಲ್ಲಿ ಬಿರುಗಾಳಿ, ಪ್ರವಾಹ ಹಾಗೂ ಅನಾವೃಷ್ಟಿಯಿಂದಾಗಿ ಕನಿಷ್ಠ 65 ಶೇಕಡಾ ಬೆಳೆ ನಾಶಗೊಂಡಿದೆ. ನಿಜಕ್ಕೂ ಇದಕ್ಕಿಂತ ಹೆಚ್ಚು ನಷ್ಟವಾಗಿದೆ. ಆದರೆ ಇದರಿಂದ ತೊಂದರೆಗೊಳಗಾದ ನೂರು ಲಕ್ಷ ಜನಕ್ಕೆ ಪರಿಹಾರ ನೀಡಲು ಸರಕಾರ ಏನೂ ಮಾಡುತ್ತಿಲ್ಲ. ಅದು ಭತ್ತ ಸಂಗ್ರಹ ಬೆಲೆಯನ್ನು 122 ರೂ. ಯಿಂದ 132 ರೂ. ವರೆಗೆ ನಿಗದಿಪಡಿಸಿದರೂ ರೈತರು 100 ರೂ.ಗೆ ಭತ್ತ ಮಾರಬೇಕಾಗಿ ಬಂದ ಪರಿಸ್ಥಿತಿಯಿತ್ತು. ರೈತರೆಲ್ಲಾ ಹತಾಶರಾಗಿ ತಮ್ಮ ಬೆಳೆ ಮಾರಿದ ನಂತರ ಮಿಲ್ ಮಾಲೀಕರು ಹಾಗೂ ಆಹಾರ ಕಾರ್ಪೊರೇಷನ್ ಏಜೆಂಟರು 200 ರೂ. ಕ್ವಿಂಟಾಲ್‌ಗೆ ಈಗ ಅದನ್ನು ಮಾರುತ್ತಿದ್ದಾರೆ!

ಇದೇ ರೀತಿ ಗ್ರಾಮಾಂತರ ಉದ್ಯೋಗ ಒದಗಿಸುವ ಯಾವ ಯೋಜನೆಗಳೂ ಜಾರಿಯಲ್ಲಿಲ್ಲ. ಆದರೆ ಈ ಯೋಜನೆಗಳ ಹೆಸರಲ್ಲಿ ಆಳುವ ಪಕ್ಷದ ಕೃಪಾ ಕಟಾಕ್ಷಕ್ಕೊಳಗಾದ ಕಂಟ್ರಾಕ್ಟರರುಗಳು ಸಾಕಷ್ಟು ಸಂಪಾದಿಸಿದ್ದಾರೆ.

ಭೂಮಿ ಹಂಚಿಕೆಯಲ್ಲಿ ಸರಕಾರ ತೀವ್ರವಾಗಿ ವಿಫಲಗೊಂಡಿದೆ. ಸ್ವಾತಂತ್ರ್ಯದ 35 ವರ್ಷಗಳ ನಂತರವೂ 47 ಶೇಕಡಾ ಒರಿಸ್ಸಾದ ಗ್ರಾಮೀಣ ಜನತೆ ಸಾಕಷ್ಟು ಭೂಮಿಯಿಲ್ಲದೆ ಒದ್ದಾಡುತ್ತಿದ್ದಾರೆ. 22 ಶೇಕಡಾ ಇರುವ ಆದಿವಾಸಿಗಳು ಇದರಲ್ಲಿ ಅತ್ಯಂತ ಹೆಚ್ಚು ತೊಂದರೆಗೊಳಗಾಗಿದ್ದಾರೆ.

ಈ ಯಾವುದರ ಬಗ್ಗೆಯೂ ತೀವ್ರ ಆಸಕ್ತಿ ಹೊಂದಿರದೇ ಇರುವ ಕಾಂಗ್ರೆಸ್ (ಐ) ಸರಕಾರದಿಂದ ಪರಿಹಾರ ಪಡೆಯಲು ಜನತೆಯನ್ನು ಒಗ್ಗೂಡಿಸಲು ಒರಿಸ್ಸಾ ಪ್ರಾಂತೀಯ ಕಿಸಾನ್ ಸಭಾ ಫೆಬ್ರುವರಿ 15 ರಿಂದ ಪಂಚಾಯತ್ ಮಟ್ಟದಲ್ಲಿ ಆರಂಭಿಸಿ, ಬ್ಲಾಕ್ ಮಟ್ಟದಲ್ಲಿ, ನಂತರ ಸಬ್-ಡಿವಿಜನ್ ಮಟ್ಟದಲ್ಲಿ ಜಾಥಾಗಳನ್ನು ನಡೆಸಿ, ಸಾರ್ವಜನಿಕ ಸಭೆಗಳನ್ನು ನಡೆಸಿ ಸರಕಾರ ಹೆಚ್ಚು ವಾಸ್ತವಿಕವಾದ ಕ್ರಮಕೈಗೊಳ್ಳುವಂತೆ ಒತ್ತಡ ತರಲು ನಿರ್ಧರಿಸಿದೆ.

ಅಸ್ಸಾಂ :

ಮತದಾರರ ಎದುರಿರುವ ಪ್ರಶ್ನೆಗಳು

ಚಳವಳಿಗಾರರು ಹಾಗೂ ಅವರ ಅಖಿಲ ಭಾರತ ರಾಜಕೀಯ ಬೆಂಬಲಿಗರು ಚುನಾವಣೆಯಿಂದ ಹೊರಗುಳಿಯಲು ನಿರ್ಧರಿಸುವುದರಿಂದ ಅಸ್ಸಾಂನ ಮತದಾರರು ಕಾಂಗ್ರೆಸ್ (ಐ) ಹಾಗೂ ಆರು ಪಕ್ಷಗಳ ಮಿತ್ರಕೂಟ ಈ ಎರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗಿದೆ.

ಎಡ ಮತ್ತು ಪ್ರಜಾಪ್ರಭುತ್ವ ಮಿತ್ರಕೂಟ ಹೊರಡಿಸಿದ 17 ಅಂಶಗಳ ಚುನಾವಣಾ ಘೋಷಣೆಯಲ್ಲಿ ಒಂದೆಡೆ ಕಾಂಗ್ರೆಸ್ (ಐ) ಹಾಗೂ ಇನ್ನೊಂದೆಡೆ ಬಿ.ಜೆ.ಪಿ.-ಜನತಾ ಬೆಂಬಲದ ಚಳವಳಿಗಾರರಿಂದ ಭಿನ್ನವಾದ ಧೋರಣೆಗಳನ್ನು ನಿರೂಪಿಸಲಾಗಿದೆ.

"ರಾಜ್ಯದ ಅಧಿಕಾರಗಳನ್ನು ವಿಸ್ತರಿಸಿ, ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಅನುಕೂಲವಾಗುವಂತೆ ಹೆಚ್ಚು ಸಂಪನ್ಮೂಲಗಳನ್ನು ಒದಗಿಸಿ ಭಾರತ ಸಂಘದ ಸಮಾನ ಪಾಲುದಾರರಾಗಲು ಸಾಧ್ಯವಾಗುವಂತೆ ಕೇಂದ್ರ-ರಾಜ್ಯ ಸಂಬಂಧಗಳನ್ನು ಪುನರ್ವ್ಯವಸ್ಥೆಗೊಳಿಸುವುದು" ಘೋಷಣೆಯ ಮುಖ್ಯ ಅಂಶಗಳಲ್ಲೊಂದು. ಸಂವಿಧಾನ, ಸಂಬಂಧಪಟ್ಟ ಕಾನೂನುಗಳು, ಅಂತರರಾಷ್ಟ್ರೀಯ ಒಪ್ಪಂದಗಳು ಇತ್ಯಾದಿಯ ಆಧಾರದ ಮೇಲೆ "ವಿದೇಶೀಯರ ಸಮಸ್ಯೆ"ಯ ದೀರ್ಘಕಾಲೀನ ಪರಿಹಾರ, ಗಡಿಭದ್ರತೆಯನ್ನು ಬಲಪಡಿಸುವುದು, ವಿವಿಧ ಜನಾಂಗೀಯ ಹಾಗೂ ಧಾರ್ಮಿಕ ಅಲ್ಪಸಂಖ್ಯಾತರಿಗೆ ಪೂರ್ಣ ರಕ್ಷಣೆ, ಸಮಾನತೆ ಹಾಗೂ ಪ್ರಜಾಪ್ರಭುತ್ವ ಹಕ್ಕುಗಳು, ರಾಜ್ಯದ ವಿವಿಧ ವಿಭಾಗಗಳ ನಡುವೆ ನಿಕಟ ಹಾಗೂ ಇನ್ನೂ ಉತ್ತಮ ಅರಿವು ಮೂಡಿಸುವುದು, ರಾಜ್ಯದ ಸಾಂಸ್ಕೃತಿಕ ತನ್ನತನ, ಸಮಗ್ರತೆ ಹಾಗೂ ಪರಂಪರೆಯನ್ನು ಉಳಿಸಿ ಕೋಮುವಾದಿ, ವಿಚ್ಛಿದ್ರಕಾರಿ, ಪ್ರತ್ಯೇಕತಾವಾದೀ ಶಕ್ತಿಗಳ ವಿರುದ್ಧ ಹೋರಾಡುವುದು ಘೋಷಣೆಯ ಇತರ ಮುಖ್ಯ ಅಂಶಗಳು

ವಾಸ್ತವವಾಗಿ ಅಸ್ಸಾಂ ಹಾಗೂ ಇತರೆಡೆಯ ಸಮಸ್ಯೆಗಳು ಕೇಂದ್ರದಲ್ಲಿ ಆಳುತ್ತಿರುವ ಪಕ್ಷ ಮೂರು ದಶಕಗಳಿಂದ ಅನುಸರಿಸಿದ ಪ್ರಜಾಪ್ರಭುತ್ವ ವಿರೋಧಿ ನೀತಿಯ ಫಲ. ಈಗ ಆ ಪಕ್ಷ ಈ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯ ಪಡೆದಿಲ್ಲ. ಬದಲಾಗಿ ಈ ಸಮಸ್ಯೆಗಳನ್ನು ಅದು ಸ್ವಾರ್ಥದ ಲಾಭಕ್ಕಾಗಿ ದುರುಪಯೋಗಪಡಿಸಿಕೊಳ್ಳುತ್ತಿದೆ. ಮಾತಿನಲ್ಲಿ ಪ್ರತ್ಯೇಕತಾವಾದದ ಬಗ್ಗೆ ಬುಸುಗುಡುವ ಆ ಪಕ್ಷ ತನಗೆ ಲಾಭವಾಗುವುದಾದರೆ ಅಂತಹ ಪ್ರತ್ಯೇಕತಾವಾದಿಗಳೊಂದಿಗೆ ಕೈಮಿಲಾಯಿಸಲೂ ಹೇಸುವುದಿಲ್ಲ. ಆದ್ದರಿಂದ ಅಸ್ಸಾಂನ ಸಮಸ್ಯೆಗಳಿಗೆ ಒಂದು ಪ್ರಜಾಸತ್ತಾತ್ಮಕ ಪರಿಹಾರ ಕಂಡುಹಿಡಿಯಲು ಅದಕ್ಕೆ ಸಾಧ್ಯವಾಗಿಲ್ಲ

ಎಡ-ಪ್ರಜಾಪ್ರಭುತ್ವ ಮಿತ್ರಕೂಟ ಅಸ್ಸಾಂನ ಜನತೆಯನ್ನು ಬಾಧಿಸುತ್ತಿರುವ ಈ ಮುಖ್ಯ ಸಮಸ್ಯೆಯ ಬಗ್ಗೆ ಮಾತ್ರವಲ್ಲ ಕಡ್ಡಾಯ ಪ್ರಾಥಮಿಕ

(7ನೇ ಪುಟ ನೋಡಿ)

ಕುಡೂರು ಆಯೋಗದ ವರದಿ — ಸರ್ಕಸ್ ದುರಂತ

— ಎನ್. ಕೆ. ಉಪಾಧ್ಯಾಯ

"ವೀನಸ್ ಸರ್ಕಸ್ ಅಗ್ನಿ ದುರಂತಕ್ಕೆ ಷಾಟ್ ಸರ್ಕಿಟ್ ಒಂದೇ ಕಾರಣವೆಂದು" ಕುಡೂರು ಆಯೋಗ ತೀರ್ಮಾನಕ್ಕೆ ಬಂದಿದೆ.

ಈ ದುರಂತಕ್ಕೆ, ಸಂಬಂಧಪಟ್ಟ ಅಧಿಕಾರಿಗಳ ಪೂರ್ಣ ನಿರ್ಲಕ್ಷವೇ ಕಾರಣವೆಂದೂ ಆಯೋಗ ಅಭಿಪ್ರಾಯ ವ್ಯಕ್ತಮಾಡಿ "ಬೆಂಕಿ ಅಪಾಯ ಒದಗದಂತೆ ಖಚಿತಪಡಿಸಿಕೊಳ್ಳಲು ಅಂತರಿಕ ವೈಯರಿಂಗನ್ನು ತೃಪ್ತಿಕರವಾಗಿ ಪರಿಶೀಲಿಸುತ್ತಲೂ ಇರಲಿಲ್ಲ. ಅಂಥ ಸಂದರ್ಭದಲ್ಲಿ ಅತ್ಯಂತ ಅನಾನುಕೂಲವಾದ ಜಾಗದಲ್ಲಿ ಸರ್ಕಸ್ ಪ್ರದರ್ಶನ ನಡೆಸಲು ಅವಕಾಶ ಮಾಡಿಕೊಡಲಾಯಿತು" ಎಂದು ಆಯೋಗ ಆರೋಪಿಸಿದೆ.

1981 ಫೆಬ್ರವರಿ 7 ರಂದು ಬೆಂಗಳೂರಿನಲ್ಲಿ ಘಟಿಸಿದ ಸರ್ಕಸ್ ದುರಂತ ದೇಶ ವಿದೇಶಗಳಲ್ಲಿ ಭಾರಿ ಸುದ್ದಿಯನ್ನುಂಟುಮಾಡಿತ್ತು. ಮನರಂಜನೆಯನ್ನು ಮುಗಿಸಿ ಮನೆ ಸೇರಬೇಕಾಗಿದ್ದ 88 ಮುದ್ದು ಮಕ್ಕಳು ಸರ್ಕಸ್ಸಿನೊಳಗೆ ಬೆಂಕಿಗಾಹುತಿಯಾದರು. ದೇಹ ಸುಟ್ಟು ಭಸ್ಮವಾಯಿತು. ತಂದೆ ತಾಯಿಗಳ ಸಾರ್ವಜನಿಕರ ಕಣ್ಣೀರು ಕೋಡಿಯಾಗಿ ಹರಿದು ಮಕ್ಕಳ ಸುಟ್ಟ ಬೂದಿಯನ್ನು ಭೂಮಿಗತ ಮಾಡಿತು.

ಕಾಂಗ್ರೆಸ್ ಪಕ್ಷದ ಎಫ್. ಎಂ. ಖಾನ್ ಮೊದಲಾದವರ ಕೈವಾಡದಿಂದ ಸರ್ಕಸ್ ನಡೆಸಲು ಅಯೋಗ್ಯವಾದ ಸ್ಥಳದಲ್ಲಿ ಅವಕಾಶ ಮಾಡಿಕೊಟ್ಟಿರುವುದರಿಂದಲೇ ಇಂಥ ದುರಂತ ಸಂಭವಿಸಿತೆಂದೂ, ಹಣದ ಪ್ರಭಾವವೂ, ಕಾಂಗ್ರೆಸ್ಸಿನ ಮೇಲಿನ ಮುಖಂಡರ ಆಶೀರ್ವಾದವೂ ಇದರಲ್ಲಿ ಪ್ರಧಾನ ಪಾತ್ರವಹಿಸಿದೆಂದೂ ಬಹಿರಂಗವಾಗಿಯೇ ಜನರು ಆಡಿಕೊಂಡರು. ವಿರೋಧ ಪಕ್ಷಗಳೂ, ದಿನಪತ್ರಿಕೆಗಳೂ, ಸಾರ್ವಜನಿಕರೆಲ್ಲ ಈ ದುರಂತದ ನ್ಯಾಯಾಂಗ ವಿಚಾರಣೆ ನಡೆಸಬೇಕೆಂದು ಆಗಿನ ಗುಂಡೂರಾವ ಸರಕಾರದ ಮೇಲೆ ಒತ್ತಾಯ ತಂದರು. ಸಾರ್ವಜನಿಕಾಭಿಪ್ರಾಯಕ್ಕೆ ಮಣಿದು ಗುಂಡೂರಾವ್ ಸರಕಾರ 2-3-1981 ರಂದು ಹೈಕೋರ್ಟ್ ನ್ಯಾಯಾಧೀಶರಾದ ಕುಡೂರ ಅವರ ಆಯೋಗ ನೇಮಿಸಿತು. ಈ ಆಯೋಗವು ತನ್ನ ಪೂರ್ಣ ವಿಚಾರಣೆ ಮುಗಿಸಿ 1-6-1982ರಂದು ತನ್ನ ಲಿಖಿತ ವರದಿಯನ್ನು ಗುಂಡೂರಾವ್ ಸರಕಾರಕ್ಕೆ ಒಪ್ಪಿಸಿತು. ಕುಡೂರ ಆಯೋಗದ ವರದಿಯನ್ನು ಒಪ್ಪಿಕೊಂಡು, ಸಂಬಂಧಪಟ್ಟವರ ಮೇಲೆ ಕ್ರಮತೆಗೆದುಕೊಳ್ಳುವ ನಿರ್ಧಾರ ಮಾತ್ರ ಗುಂಡೂರಾವ್ ಸರಕಾರ ಮಾಡಲಿಲ್ಲ. ಸರ್ಕಸ್ ದುರಂತದ ಕುಡೂರ ವರದಿಯನ್ನು ಬಹಿರಂಗಗೊಳಿಸಬೇಕೆಂದು ವಿರೋಧಿ ಪಕ್ಷದವರು ಎಷ್ಟು ಒತ್ತಾಯ ಮಾಡಿದರೂ ಗುಂಡೂರಾವ್ ಸರಕಾರ ಅದಕ್ಕೆ ಮಣಿಯಲಿಲ್ಲ. ತನ್ನ ಪಕ್ಷದ ಕೆಲವು ಮುಖಂಡರ ಕೈವಾಡದಿಂದಲೇ, ಭ್ರಷ್ಟ ನೀತಿಯಿಂದಲೇ ಇಂಥ ಇಕ್ಕಟ್ಟಿನ ಸ್ಥಳದಲ್ಲಿ ನೀತಿ, ನಿಯಮಗಳನ್ನೆಲ್ಲ ಬದಿಗೊತ್ತಿ ಸರ್ಕಸ್ ನಡೆಸಲು ಅವಕಾಶ ಮಾಡಿಕೊಡಲಾಗಿದೆಂದೂ, ಆ ಕಾರಣದಿಂದಲೇ ಇಂಥ ಭೀಕರ ದುರಂತ ನಡೆಯಿತೆಂಬ ಸಂಗತಿ ಆಯೋಗದ ವರದಿಯಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆಂಬ ಸಂಗತಿ ಗುಂಡೂರಾವ ಸರಕಾರಕ್ಕೆ ತಿಳಿದು ಬಂದಿರುವುದರಿಂದ, ಆಯೋಗದ ವರದಿಯನ್ನು ಪ್ರಕಟಿಸಿದರೆ ಜನ ಸಮಾಧಾನಗೊಳ್ಳದೆ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆಂದೂ, ಹಾಗೆ ಮಾಡಿದ್ದಾದರೆ ತನ್ನ ಪಕ್ಷದೊಳಗೆ ಮತ್ತೊಂದು ದುರಂತ ಸಂಭವಿಸಿ ಪಾರ್ಟಿಯೊಳಗಿನ ಕೆಲವು ವಿ.ಐ.ಪಿಗಳು ಅದಕ್ಕೆ ಬಲಿಯಾಗುವ ಸಂಭವವಿದೆಂದು ತಿಳಿದೇ ಗುಂಡೂರಾಯರು ಕುಡೂರ ವರದಿಯನ್ನು ಮುಚ್ಚಿಟ್ಟಿದ್ದರು.

ಮೊನ್ನೆ ನಡೆದ ಚುನಾವಣೆಯಲ್ಲಿ ಗುಂಡೂರಾವ್ ಸರಕಾರ ಸೋತುಹೋಯಿತು. ರಾಮಕೃಷ್ಣ ಹೆಗಡೆಯವರ ಜನತಾ ಸರಕಾರ ಅಧಿಕಾರಕ್ಕೆ ಬಂತು. ಕುಡೂರ ಆಯೋಗದ ವರದಿಯನ್ನು ಸರಕಾರ ಒಪ್ಪಿಕೊಳ್ಳುತ್ತದೆಂದೂ, ಅದನ್ನು ಸಾರ್ವಜನಿಕರ ಮಾಹಿತಿಗಾಗಿ ಬಿಡುಗಡೆ ಮಾಡುತ್ತದೆಂದೂ ವಿರೋಧ ಪಕ್ಷಗಳು ತಮ್ಮ ಚುನಾವಣೆಯ ಘೋಷಣೆಯಲ್ಲಿ ಸಾರಿದ್ದವು. ಜನತಾ, ಕ್ರಾಂತಿರಂಗ, ಸಿ.ಪಿ.ಐ(ಎಂ) ಮತ್ತು ಸಿ.ಪಿ.ಐ. ಬೆಂಬಲದಿಂದ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದ ಕೂಡಲೇ ಚುನಾವಣಾ ಘೋಷಣೆಯ ಒಂದಂಶವನ್ನು ಅಂದರೆ ಕುಡೂರ ಆಯೋಗದ ವರದಿಯನ್ನು ಒಪ್ಪಿಕೊಂಡು ಅದನ್ನು ಬಹಿರಂಗಪಡಿಸಿದ್ದಾರೆ. ಇದು ಸ್ವಾಗತಾರ್ಹ.

ನ್ಯಾಯಮೂರ್ತಿ ಎಸ್. ಆರ್. ಕುಡೂರ ಅವರು ಸಂದರ್ಭ, ಸಾಕ್ಷ್ಯಗಳನ್ನೆಲ್ಲ ಸಮಗ್ರವಾಗಿ ಪರಿಶೀಲಿಸಿ, ವಿಶ್ಲೇಷಿಸಿ "ಸರ್ಕಸ್ಸಿನ ಆಡಳಿತ ವರ್ಗದ ಮುಂದೆ ಅಧಿಕಾರಿಗಳು ಕುಸಿದು ಬಿದ್ದರು" ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ಆಡಳಿತ ವರ್ಗದವರ ಭಾರವಾದ ಹಣದ ಚೀಲವನ್ನು ಹೊತ್ತು ಅಧಿಕಾರಿಗಳು ಕುಸಿದುಬಿದ್ದರು. ರೇಲ್ವೆ, ಪೋಲೀಸ್, ಪಿ.ಡಬ್ಲ್ಯೂ.ಡಿ, ವಿದ್ಯುತ್ ಪೂರೈಕೆ ನಿಯಮಗಳನ್ನೆಲ್ಲ ಉಲ್ಲಂಘಿಸಿ ಸರ್ಕಸ್ ಪ್ರದರ್ಶನಕ್ಕೆ ಅವಕಾಶ ಮಾಡಿಕೊಟ್ಟರು.

ಆ ನಿವೇಶನದಲ್ಲಿ ಸರ್ಕಸ್‌ಗೆ ಅಗತ್ಯವಾದ ನಿರ್ಮಾಣಕ್ಕೆ ಅಭ್ಯಂತರವಿಲ್ಲವೆನ್ನುವ ಸರ್ಟಿಫಿಕೇಟನ್ನು ಲೋಕೋಪಯೋಗಿ ಇಲಾಖೆಯಿಂದ ತರಬೇಕೆಂದು ಪೋಲೀಸ್ ಕಮೀಶನರ್ ಅವರು ತಾವು ನೀಡಿದ ಲೈಸೆನ್ಸ್‌ನಲ್ಲಿ ಷರತ್ತು ಹಾಕಿದ್ದರು. ಅಂಥ ಸರ್ಟಿಫಿಕೇಟಿಗಾಗಿ 17-12-81ರಂದು ಅರ್ಜಿ ಸಲ್ಲಿಸಲಾಯಿತು. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ರಾದ ನಾರಾಯಣಅವರು 18-12-81ರಂದು ಸ್ಥಳಕ್ಕೆ ಭೇಟಿ ನೀಡಿ, 5 ಸಾವಿರ ಮಂದಿ ಪ್ರೇಕ್ಷಕರಿಗೆ ವ್ಯವಸ್ಥೆ ಮಾಡಬೇಕಾದಂತ ಸರ್ಕಸ್ ನಡೆಸಲು ಅದು ಸೂಕ್ತ ಸ್ಥಳವಲ್ಲವೆನ್ನುವ ತಮ್ಮ ಅಭಿಪ್ರಾಯವನ್ನು ವರದಿಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದರು. 1) ಬಯಲಿಗೆ ಅವಕಾಶವಿಲ್ಲದ ಸರ್ಕಸ್ ಗುಡಾರವನ್ನು ಮುಖ್ಯ ರಸ್ತೆಯವರೆಗೆ ಹಾಕುವ ಆಲೋಚನೆಯಿತ್ತು, 2) ಸರ್ಕಸ್ ನಡೆಯಲಿದ್ದ ಜಮೀನಿನ ಮೇಲೆ ಹೈಟೆನ್‌ಶನ್ ವಿದ್ಯುತ್ ತಂತಿ ಹಾದು ಹೋಗಿತ್ತು, 3) ವಾಹನಗಳನ್ನು ನಿಲ್ಲಿಸಲು ಸ್ಥಳಾವಕಾಶವಿಲ್ಲ, 4) ಗುಡಾರ ಹಾಕಬೇಕಾಗಿದ್ದ ಭೂಮಿ ಭದ್ರವಾಗಿಲ್ಲವೆಂಬ ವಿಷಯಗಳನ್ನು ತಮ್ಮ ವರದಿಯಲ್ಲಿ ಶ್ರೀ ನಾರಾಯಣ ಅವರು ಸ್ಪಷ್ಟಪಡಿಸಿದ್ದರು.

ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರು 23-12-1980 ರಂದು ಸ್ಥಳ ಪರಿಶೀಲಿಸಿದರು. ಆ ವೇಳೆಗೆ ಸರ್ಕಸ್ ಪ್ರದರ್ಶನ ಆರಂಭವಾಗಿ ಹೋಗಿತ್ತು. ಅಭ್ಯಂತರವಿಲ್ಲೆಂಬ ಸರ್ಟಿಫಿಕೇಟನ್ನು ಅದೇ ದಿವಸ ಮಂಜೂರು ಮಾಡಿದರು.

ಸರ್ಕಸ್ 19 ರಂದೇ ಪ್ರಾರಂಭವಾಗಬೇಕಾಗಿತ್ತು, ಪ್ರಾರಂಭವೂ ಆಗಿತ್ತು. ತಾ|| 18ಕ್ಕೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರು ತಮ್ಮ ವರದಿ ಸಲ್ಲಿಸಿದ್ದರೂ ಕೂಡ ಎಕ್ಸಿಕೂಟಿವ್ ಇಂಜಿನಿಯರ್ ಅವರ "ಅಭ್ಯಂತರವಿಲ್ಲ" ಎಂಬ ಸರ್ಟಿಫಿಕೇಟ್ ನೀಡುವ ವೇಳೆಗೆ ಸರ್ಕಸ್ ಪ್ರದರ್ಶನ ಆರಂಭವಾಗಿ ಹೋಗಿತ್ತು. ತಾ|| 18 ರಿಂದ 23ರ ವರೆಗೆ ಈ ಸರ್ಟಿಫಿಕೇಟ್ ನೀಡಲು ವಿಳಂಬವೇಕಾಯಿತು? ಓದುಗರೇ ಅರ್ಥ ಮಾಡಿಕೊಳ್ಳಬೇಕು. ಕುಡೂರು ಆಯೋಗವು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜನಿಯರ್ ಅವರದ್ದು "ಕಾರ್ಯ ತತ್ಪರತೆ" ಎಂದು ಪ್ರಶಂಸಿಸಿ, ಎಕ್ಸಿಕ್ಯೂಟಿವ್ ಇಂಜನಿಯರ್ ಅವರು "ಹೊಣೆಗೇಡಿತನದಿಂದ ವರ್ತಿಸಿದ್ದಾರೆ"ಂದು ಟೀಕಿಸಿದೆ.

ಲೋಕೋಪಯೋಗಿ ಇಲಾಖೆಯ ಸರ್ಟಿಫಿಕೇಟು ಇಲ್ಲದೆ ಪ್ರದರ್ಶನ ನಡೆಯಬಾರದೆಂದು ಪೋಲೀಸ್ ಅಧಿಕಾರಿಗಳು ಸರ್ಕಸ್ ಮ್ಯಾನೇಜರರಿಗೆ ತಿಳಿಸಿದ್ದರು. ಆದರೆ ಅಂಥ ಸರ್ಟಿಫಿಕೇಟಿಲ್ಲದೆ ತಾ|| 19 ರಂದೇ ಸರ್ಕಸ್ ಆಟ ಪ್ರಾರಂಭವಾಗಿತ್ತು. ಯಾವ ಅಧಿಕಾರಿಯಾಗಲೀ ಅದನ್ನು ತಡೆಯಲಿಲ್ಲ. ಅದರ ಬದಲಾಗಿ ಎಲ್ಲ ಅಧಿಕಾರಿಗಳೂ ತಮ್ಮ ಹೆಂಡರು ಮಕ್ಕಳೊಂದಿಗೆ ಬಂದು ಪುಕ್ಕಟೆಯಾಗಿ ಸರ್ಕಸ್ ನೋಡಿ ಆನಂದಪಟ್ಟಿರಬೇಕು. ತಾ|| 23 ರಂದು ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ನಾರಾಯಣ ಅವರ ವರದಿಯಂತೆ ಸ್ಥಳ ಪರಿಶೀಲನೆಗೆ ಬಂದಾಗ ಸರ್ಕಸ್ ಪ್ರಾರಂಭವಾಗಿರುವುದನ್ನು ಕಂಡು ಅದನ್ನು ತಡೆಹಿಡಿಯುವಂತೆ ಹೇಳಬಹುದಾಗಿತ್ತು. ಹಾಗೆ ಮಾಡದೆ "ಅಭ್ಯಂತರವಿಲ್ಲ"ವೆಂಬ ಸರ್ಟಿಫಿಕೇಟ್ ಕೊಟ್ಟಿರುವುದು ಹೊಣೆಗೇಡಿತನವೆಂದು ಆಯೋಗ ಹೇಳಿರುವುದು ಸಮರ್ಪಕ.

ರೇಲ್ವೆ ಇಲಾಖೆಯ ಜವಾಬ್ದಾರಿ

ಸರ್ಕಸ್ ಪ್ರದರ್ಶನಕ್ಕಾಗಿ ನೀಡಲಾಗಿದ್ದ ಭೂಮಿ ರೇಲ್ವೆ ಇಲಾಖೆಗೆ ಸೇರಿದ್ದು. 2 ವರ್ಷಗಳಿಂದ ಕಾರ್ಪೊರೇಶನ್‌ನವರು ಕೆಡವಲಾದ ಮನೆಗಳ ಮಣ್ಣನ್ನು ಆ ಜಮೀನಿನಲ್ಲಿ ತುಂಬುತ್ತಿದ್ದರು. 1980 ನವಂಬರ್ 18 ರಂದು ಸ್ಥಳಕ್ಕೆ ಭೇಟಿ ಕೊಟ್ಟಾಗ ಭೂಮಿಯಲ್ಲಿ ಹಳ್ಳಕೊಳ್ಳಗಳಿದ್ದದ್ದು ಮತ್ತು ಕಸದ ರಾಶಿ ಹಾಕಿದ್ದುದನ್ನು ರೇಲ್ವೆಯ ಡಿವಿಜನಲ್ ಇಂಜಿನಿಯರ್ ಸ್ವತಃ ನೋಡಿದ್ದರು. ಸರ್ಕಸ್ ಕಂಪೆನಿಗೆ ಅನುಮತಿ ಕೊಡುವಂತೆ ಶಿಫಾರಸುಮಾಡಿದಾಗ ಆ ಜಮೀನಿನಲ್ಲಿ ಭದ್ರವಿಲ್ಲದ ಮಣ್ಣಿನ ರಾಶಿ ಇತ್ತೆಂಬುದು ಅವರಿಗೆ ಗೊತ್ತಿತ್ತು. ಜಮೀನಿನ ಎರಡೂ ಕಡೆ ತೆರೆದ ಚರಂಡಿಗಳಿದ್ದವು.

"ಸರ್ಕಸ್‌ಗೆ ಜಮೀನಿನ ಸೂಕ್ತತೆಯನ್ನು ಡಿವಿಜನಲ್ ಇಂಜಿನಿಯರ್ ಅವರು ಪರಿಶೀಲಿಸಲಿಲ್ಲ. ರೇಲ್ವೆ ಇಲಾಖೆಗೆ ಆದಾಯ ಬರುವುದೆಂಬುದನ್ನಷ್ಟೆ ಅವರು ನೋಡಿದ್ದರು. ಜನರ ದೃಷ್ಟಿಯಿಂದ ಈ ಜಾಗ ಸುರಕ್ಷಿತವೇ ಎನ್ನುವುದನ್ನು ಅನುಮತಿಗೆ ಶಿಫಾರಸು ಮಾಡುವ ಮುನ್ನ ಪರಿಶೀಲಿಸುವುದು ತಮ್ಮ ಕರ್ತವ್ಯವಾಗಿತ್ತೆಂದು ಆ ನಂತರ ಇಂಜಿನಿಯರ್ ಒಪ್ಪಿಕೊಂಡರು" ಎಂದು ಆಯೋಗ ಹೇಳಿದೆ. ಆ ಜಮೀನು ಸರ್ಕಸ್‌ಗೆ ಸೂಕ್ತವಾಗಿರಲಿಲ್ಲೆಂಬುದು ಸಾಕ್ಷಿ ನುಡಿದ ರೇಲ್ವೆ ಅಧಿಕಾರಿಗಳಿಗೆಲ್ಲಾ ಗೊತ್ತಿತ್ತು. ಯಾವ ಅಧಿಕಾರಿಯೂ ಅವರಿಂದ ನಿರೀಕ್ಷಿಸಲಾಗುವ ಎಚ್ಚರಿಕೆಯನ್ನು ವಹಿಸಲಿಲ್ಲೆಂಬುದು ಸಾಕ್ಷ್ಯದಿಂದ ವೇದ್ಯವಾಗಿದೆಂದೂ ಆಯೋಗ ತಿಳಿಸಿದೆ. ಸರ್ಕಸ್ ಕಂಪೆನಿಗೆ ಅನುಮತಿ ಕೊಟ್ಟುಬಿಟ್ಟಿದ್ದರಿಂದ ಆ ಜಮೀನಿನ ಸ್ವಾಧೀನ ರೇಲ್ವೆ ಇಲಾಖೆಯಿಂದ ಕೈತಪ್ಪಿ ಹೋಗಿತ್ತೆಂದು ಹೇಳುವಂತಿಲ್ಲ" ಎಂದೂ ಆಯೋಗ ರೈಲ್ವೆ ಅಧಿಕಾರಿಗಳಿಗೆ ಕಿವಿಚುಚ್ಚುವ ಮಾತು ಹೇಳಿದೆ.

ಬೆಂಗಳೂರು ಕಾರ್ಪೊರೇಶನ್ ಅಧಿಕಾರಿಗಳ ನಡತೆ

ಸರ್ಕಸ್ ನಡೆಯುವ ಭೂಮಿ ಆರೋಗ್ಯ ದೃಷ್ಟಿಯಿಂದ, ಸುರಕ್ಷತೆಯ ದೃಷ್ಟಿಯಿಂದ ಸೂಕ್ತವೆಂದು ಬೆಂಗಳೂರು ಕಾರ್ಪೊರೇಶನ್ ಅಧಿಕಾರಿಗಳು ತೀರ್ಮಾನಿಸಿರುವುದನ್ನು ಕುಡೂರ ಆಯೋಗ ಬಲವಾಗಿ ಖಂಡಿಸಿ ಯಾವ ಆಧಾರದಿಂದ ಇಂಥ ನಿರ್ಣಯಕ್ಕೆ ಬರಲಾಯಿತೆಂದು ತಿಳಿಯುವುದು ಅಸಾಧ್ಯವೆಂದು ಹೇಳಿದ್ದಾರೆ. "ಸರ್ಕಸ್ ಮ್ಯಾನೇಜರ್ ಹೇಳಿದ್ದನ್ನೇ (ನೈರ್ಮಲ್ಯ ವ್ಯವಸ್ಥೆಯ ಬಗ್ಗೆ) ನಂಬಿ ಶಿಫಾರಸು ಮಾಡಲಾಗಿದೆ" ಎಂದು ಅಭಿಪ್ರಾಯ ವ್ಯಕ್ತಮಾಡಿದ್ದಾರೆ.

ಈ ಸರ್ಕಸ್‌ಗೆ ಹಂಗಾಮಿ ಕಟ್ಟಡ ನಿರ್ಮಾಣಕ್ಕಾಗಿ ಲೈಸೆನ್ಸ್ ಕೊಟ್ಟಿರುವುದನ್ನು ಆಯೋಗ ಪ್ರಸ್ತಾಪಿಸಿ "ಕಮಿಶನರ್ ದೊರೆರಾಜ ಅವರಿಗೆ ಸರ್ಕಸ್ ನೋಡಲು ಸಾವಿರಾರು ಮಂದಿ ಸೇರುತ್ತಾರೆನ್ನುವುದು ಗೊತ್ತು. ಆಗಬಹುದಾಗಿದ್ದ ವಿಪತ್ತನ್ನು ತಪ್ಪಿಸಲು ಕಾರ್ಪೊರೇಶನ್ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಸರ್ಕಸ್ಸಿನವರು ಹಂಗಾಮಿ ಕಟ್ಟಡಕ್ಕೆ ಬಟ್ಟೆ ಮತ್ತಿನ್ನಿತರ ಹತ್ತಿಕೊಳ್ಳುವಂತ ವಸ್ತು ಉಪಯೋಗಿಸುತ್ತಾರೆನ್ನುವುದನ್ನು ಲೈಸೆನ್ಸ್ ಕೊಟ್ಟಾಗ ತನಗೆ ತಿಳಿದಿರಲಿಲ್ಲೆಂದು ಅಧಿಕಾರಿಗಳು ಹೇಳಿದ್ದಾರೆ.

"ಅವರೇ ಒಪ್ಪಿಕೊಂಡಂತೆ ಪೋಲೀಸರು ಆ ವೇಳೆಗಾಗಲೇ ಲೈಸೆನ್ಸ್ ಕೊಟ್ಟುಬಿಟ್ಟಿದ್ದರು. ಕಾರ್ಪೊರೇಶನ್ ಕಮೀಶನರ್ ಲೈಸೆನ್ಸ್ ನೀಡುವ ತೀರ್ಮಾನಕ್ಕೆ ಈ ಅಂಶ ಪ್ರಭಾವ ಬೀರಿದುದು ಕಾರಣವೆಂದು ನನಗನಿಸುತ್ತದೆ" ಎಂದು ನ್ಯಾಯಮೂರ್ತಿ ಕುಡೂರ ಹೇಳಿದ್ದಾರೆ.

ಕಾರ್ಪೊರೇಶನಿನ ಅನುಮತಿ ಪಡೆಯದೆ ಅಕ್ರಮವಾಗಿ ಸರ್ಕಸ್‌ನವರು ಅನುಮತಿ ಪಡೆಯದೆ ಅಕ್ರಮವಾಗಿ ಸರ್ಕಸ್‌ನವರು ಹಂಗಾಮಿ ಕಟ್ಟಡ ಕಟ್ಟುತ್ತಿದ್ದಾರೆಂದು ಡಿಸೆಂಬರ್ 27 ರಂದೇ ಅವರು ಲೈಸೆನ್ಸಿಗಾಗಿ ಬಂದಾಗ ಕಾರ್ಪೊರೇಶನ್ ಕಮಿಶನರಿಗೆ ಗೊತ್ತಾಗಿತ್ತಂತೆ. ಆದರೆ ಕಮಿಶನರ್ ಅದರ ಕುರಿತು ಏನೂ ಕ್ರಮ ತೆಗೆದುಕೊಳ್ಳಲಿಲ್ಲ. "ನಕ್ಷೆಗನುಗುಣವಾಗಿ ಹಂಗಾಮಿ ನಿರ್ಮಾಣಕ್ಕೆ 27 ರಂದು ಅನುಮತಿ ಕೊಟ್ಟು, ಅದು ಅಂದಿನಿಂದ ಜಾರಿಗೆ ಬಂದುದಾಗಿ ಹೇಳುವುದು ತಿಳಿಗೇಡಿತನ. ಆವೇಳೆಗಾಗಲೇ ಸರ್ಕಸ್‌ನವರು ಕಟ್ಟಡ ನಿರ್ಮಾಣ ಮಾಡಿದ್ದರು ಮತ್ತು ಪ್ರದರ್ಶನವನ್ನೂ ಆರಂಭಿಸಿದ್ದರು. ಪರಿಣಾಮವೇನೆಂದರೆ ಸಾರ್ವಜನಿಕ ಆರೋಗ್ಯ ಮತ್ತು ಸುರಕ್ಷತೆಗೆ ಸೂಕ್ತವಾದದ್ದೆಂದು ಕಾರ್ಪೊರೇಶನ್ ಅಧಿಕಾರಿಗಳಿಂದ ಶಿಫಾರಸು ಇಲ್ಲದೆ ಅಕ್ರಮ ಕಟ್ಟಡದಲ್ಲಿ ಪ್ರದರ್ಶನ ನಡೆಸಲು ಅವಕಾಶ ಕೊಡಲಾಯಿತು" ಎಂದು ವರದಿ ತಿಳಿಸಿದೆ.

ವಿವೇಕವಿಲ್ಲದ ಪೋಲೀಸ್ ಕ್ರಮ

ಬೆಂಗಳೂರು ನಗರದಲ್ಲಿ ಸರ್ಕಸ್ ಪ್ರದರ್ಶನಕ್ಕೆ ಲೈಸೆನ್ಸ್ ಕೊಡುವ ಅಧಿ

(6ನೇ ಪುಟ ನೋಡಿ)

ಮಾರ್ಕ್ಸ್ ಮರಣಶತಾಬ್ದಿ ಲೇಖನ ಮಾಲೆ

ಲೇಖಾಂಕ—1 ಭಾಗ—2

(ಕಳೆದ ಸಂಚಿಕೆಯಿಂದ)

1907—1912

1905ರ ಕ್ರಾಂತಿಯನ್ನು ಜ್ಹಾರ್ ಶಾಹಿಯು ಅತ್ಯಂತ ಭಯಂಕರ ದಬ್ಬಾಳಿಕೆಯಿಂದ ಬಗ್ಗು ಬಡಿದರು. ಸಾವಿರ ಸಾವಿರ ಸಂಖ್ಯೆಯಲ್ಲಿ ಕಾರ್ಮಿಕರೂ-ರೈತರೂ ಕೃಷಿ ಕೂಲಿಗಾರರೂ-ರಷ್ಯಾದ ಬಡ ಜನತೆ-ಕೊಲೆಗೈಯಲ್ಪಟ್ಟರು. ಕ್ರಾಂತಿ ಸೋತು ಹೋಯಿತು.

ಆದರೆ ಜ್ಹಾರ್ ಶಾಹಿಯ ದಬ್ಬಾಳಿಕೆ ಮಾತ್ರ ನಿಲ್ಲಲಿಲ್ಲ. ಸಾವಿರಾರು ಸಂಖ್ಯೆಯಲ್ಲಿ ಧೀರ ಹೋರಾಟಗಾರರನ್ನೂ, ಸಮಾಜವಾದಿಗಳನ್ನೂ, ಸಮಾಜವಾದೀ ಅನುಭಾವಿಗಳನ್ನೂ ಬಂಧಿಸಿ ಚಿತ್ರಹಿಂಸೆಗೆ ಗುರಿ ಮಾಡಿದರು. ಗಡೀಪಾರು ಮಾಡಿದರು. ಈ ಮರ್ಧನದ ಕಾಲವನ್ನು ಸ್ಟೋಲಿಪಿನ್ ದಬ್ಬಾಳಿಕೆ ಕಾಲ ಎಂದು ಕರೆಯುತ್ತಾರೆ.

ಕಾಲಗರ್ಭದಲ್ಲಿ ಶೋಷಣೆಯುಳ್ಳ, ವರ್ಗ ಸಮಾಜದಲ್ಲಿ ಆಳುವ ವರ್ಗಗಳು ಅನುಸರಿಸುತ್ತಾ ಬಂದ "ರಾಜತಂತ್ರ"ವನ್ನು ಜ್ಹಾರ್‌ಶಾಹಿ ಮುಖ್ಯಮಂತ್ರಿ ಸ್ಟೋಲಿಪಿನ್ ಕೂಡಾ ಅನುಸರಿಸಲು ಆರಂಭಿಸಿದರು. ರಾಜದಂಡವನ್ನು ಉಪಯೋಗಿಸಿ ಜನರನ್ನು ಮರ್ಧಿಸುವ ವೇಳೆಯಲ್ಲಿಯೇ ರಾಜನೀತಿಯನ್ನು ಉಪಯೋಗಿಸಿ "ಡ್ಯೂಮಾ" (ರಷ್ಯನ್ ಪಾರ್ಲಿಮೆಂಟ್)ಕ್ಕೆ ಚುನಾವಣೆಗಳನ್ನು ನಡೆಸಿದರು. 1905ರ ಕ್ರಾಂತಿಯು ಉನ್ನತ ಮಟ್ಟದಲ್ಲಿರುವಾಗ "ಡ್ಯೂಮಾ ಚುನಾವಣೆ"ಗಳನ್ನು ಸರಕಾರವು ಘೋಷಿಸಿದಾಗ ಲೆನಿನರು ಇದು ಜನತೆಯನ್ನು ಕ್ರಾಂತಿಯ ಹೋರಾಟದಿಂದ ಬೇರೆಡೆಗೆ ಮನಸ್ಸನ್ನೊಯ್ಯಲು ಹೂಡಿದ ತಂತ್ರವೆಂದು ಸಾರಿ "ಚುನಾವಣೆಗಳನ್ನು ಬಹಿಷ್ಕರಿಸೋಣ!" ಎಂಬ ಕರೆಯನ್ನು ರಷ್ಯದ ಜನತೆಗೆ ಕೊಟ್ಟರು. ಅದೇ ಲೆನಿನರು ಕ್ರಾಂತಿ ಸೋತು ಜ್ಹಾರ್‌ಶಾಹಿ ದಬ್ಬಾಳಿಕೆ ತೀವ್ರತಮವಾಗಿರುವಾಗ ಸರಕಾರವು ಡ್ಯೂಮಾ ಚುನಾವಣೆಗಳಿಗೆ ಪುನಃ ಕರೆಕೊಟ್ಟಾಗ, ಈಗ ಚುನಾವಣೆಗಳಲ್ಲಿ ಜನತೆ ಭಾಗವಹಿಸಬೇಕು ಎಂದು ಘೋಷಿಸಿದರು.

ಹೀಗೆ ಪರಿಸ್ಥಿತಿಯ ಏರುಪೇರುಗಳಿಗನುಗುಣವಾಗಿ, ಸ್ಥಿತಿಗತಿಗಳ ಹಿಂದುಮುಂದುಗಳನ್ನು ನೋಡಿಕೊಂಡು "ಬಳಸುವ ತಂತ್ರ"ಗಳನ್ನು ಬದಲಿಸಬೇಕು ಎಂದು ಪ್ರಯೋಗಿಕವಾಗಿ ಕಾರ್ಮಿಕ ವರ್ಗದ ರಾಜಕೀಯ ಪಕ್ಷಕ್ಕೆ ಕಲಿಸಿಕೊಟ್ಟರು 3 ನೇ ಅಂತರರಾಷ್ಟ್ರೀಯದ ಕಮ್ಯುನಿಸ್ಟ್ ಪಾರ್ಟಿಗಳಿಗೆ ಅತ್ಯಂತ ಉಪಯುಕ್ತವಾದ "ತಂತ್ರಶಾಸ್ತ್ರ" (ಮುಂದಾಳುತ್ವದ ವಿಜ್ಞಾನ) ಬೆಳೆಸಿದರು ಕಾ| ಲೆನಿನರು

1907-1912 ರ ಈ ಕಾಲಘಟ್ಟದಲ್ಲಿ ನಡೆದ ಚುನಾವಣೆಗಳಲ್ಲಿ ಕಾರ್ಮಿಕ ಕೇಂದ್ರಗಳಲ್ಲೆಲ್ಲಾ ಕಾರ್ಮಿಕರ ಪ್ರತಿನಿಧಿಗಳಾಗಿ ಬೋಲ್ಶೆವಿಕರು ಚುನಾಯಿತರಾದರು. ದೇಶದಲ್ಲೆಲ್ಲ "ಜನತೆಯ ಬಾಯಿಗೆ ಬೀಗ ಮುದ್ರೆ ಹಾಕಿದ ಸ್ಥಿತಿ ಇದ್ದಾಗ" ಈ ಜನತಾ ಪ್ರತಿನಿಧಿಗಳು "ಜನತೆಯ ವಾಣಿಯನ್ನು ರಷ್ಯನ್ ಡ್ಯೂಮಾದೊಳಗಡೆ ಮೊಳಗಿದರು."

ಕಮ್ಯುನಿಸ್ಟರು ಪಾರ್ಲಿಮೆಂಟ್ ತಂತ್ರಗಳನ್ನೂ, ಪಾರ್ಲಿಮೆಂಟೇತರ ತಂತ್ರಗಳನ್ನೂ ಕಾಲಕ್ಕನುಗುಣವಾಗಿ ಉಪಯೋಗಿಸಲು ಕಲಿಯಬೇಕು ಎಂದು ಲೆನಿನರು ಮಾರ್ಗದರ್ಶನವಿತ್ತರು. ಯಾವ ದೇಶದ ಕಮ್ಯುನಿಸ್ಟ್ ಪಾರ್ಟಿಗೆ ಪಾರ್ಲಿಮೆಂಟರಿ ಮತ್ತು ಪಾರ್ಲಿಮೆಂಟೇತರ ಚಟುವಟಿಕೆಗಳನ್ನು ಅತಂತ್ರಗಳನ್ನು ಸಮಯವನ್ನರಿತು ಉಪಯೋಗಿಸುವ ಕಲೆ ಕರಗತವಾಗುವುದಿಲ್ಲವೋ ಅಂತಹ ಕಮ್ಯುನಿಸ್ಟ್ ಪಾರ್ಟಿಯಿಂದ ಕ್ರಾಂತಿ ಅಸಾಧ್ಯ ಎಂಬುದು ಮಾತ್ರ ಸತ್ಯ.

ಈ ಕಾಲಾಂತರದಲ್ಲಿ ರಷ್ಯನ್ "ಪ್ರಜಾಸತ್ತಾತ್ಮಕ ಸಮಾಜವಾದಿ ಪಕ್ಷ"ದಿಂದ ಸಾವಿರಾರು ಮಂದಿ ಕಮ್ಯುನಿಸ್ಟರು ಕಮ್ಯುನಿಸ್ಟ್ ಮುಂದಾಳುಗಳು ಪಾರ್ಟಿಯಿಂದ ದೂರ ಸರಿದರು. ಕೆಲವರು "ಆಧ್ಯಾತ್ಮವಾದಿಗಳೂ, ನಿಗೂಢ ತತ್ವಜ್ಞರೂ ಆದರು ದ್ವಂದ್ವಮಾನ ಭೌತಿಕವಾದದ ದಾರಿಯನ್ನೇ ಬಿಟ್ಟು "ದೈವ, ದೈವಸ್ಫೂರ್ತಿ, ಹಣೆಬಂಹ'ದಹಾದಿ ಹಿಡಿದರು. ಎಷ್ಟೋ ಮಂದಿ ದಬ್ಬಾಳಿಕೆ, ಮರ್ಧನಕ್ಕೆ ಹೆದರಿ 'ಬೋಲ್‌ಶೆವಿಕ್ ಹಾದಿಯೇ ತಪ್ಪು, ಮೆನ್‌ಶೆವಿಕರ ಪರಿಷ್ಕರಣದ ಹಾದಿಯೇ ಸರಿ' ಎಂಬ ಅಭಿಪ್ರಾಯಕ್ಕೆ ಬಂದರು. ಹಲವರು ಜ್ಹಾರ್ ಶಾಹಿಯ ಭಕ್ತರಾಗಿ ಜ್ಹಾರ್ ಶಾಹಿಗೆ ಶರಣಾಗತರಾದರು.

ಆದರೆ, ಬೋಲಾಶೆವಿಕ್ ಪಾರ್ಟಿಯ ಶಕ್ತಿ ಮಾತ್ರ ಕಡಿಮೆಯಾಗಿಲ್ಲ. ತಾತ್ಕಾಲಿಕವಾಗಿ ಕ್ರಾಂತಿಕಾರಿ ಚಳವಳಿಯಲ್ಲಿ 'ಹಿನ್ನಡೆ'ಯುಂಟಾಗಿದ್ದರೂ, ಪಾರ್ಟಿಯ ಸದಸ್ಯತನದ ಸಂಖ್ಯೆ ಇಳಿಮುಖವಾಗಿದ್ದರೂ, ಪಾರ್ಟಿಯ ಕ್ರಾಂತಿಕಾರಿ ಸತ್ವ, ಕ್ರಾಂತಿಕಾರಿ ಗುಣವನ್ನು 'ಕಣ್ಣಿಗೆ ಎಣ್ಣೆ ಹಾಕಿ ಕಾಪಾಡುತ್ತಾ ಬಂದರು ಕಾ| ಲೆನಿನ್ ಮತ್ತವರ ಸಹೋದ್ಯೋಗಿಗಳು.

ಈ ಕಾಲಾವಧಿಯಲ್ಲಿ ಲೆನಿನರು ಒಂದು ಮಹಾ ಮಾರ್ಕ್ಸಿಸ್ಟ್ ಗ್ರಂಥವನ್ನು ಬರೆದರು ಅದೇ ಎಂಪಿರಿಕೋ ಕ್ರಿಟಿಸಿಸಂ, (ಅಧ್ಯಾತ್ಮವಾದದ ದ್ವಂದ್ವಮಾನ ಭೌತಿಕವಾದೀ ಟೀಕೆ) ಎಂಬ ಗ್ರಂಥ. ಈ ಗ್ರಂಥದಲ್ಲಿ ಕಾಲಗರ್ಭದಲ್ಲಿ ಬೆಳೆದು ಬಂದ ಎಲ್ಲಾ ವಿಧದ, ಎಲ್ಲಾ ಸ್ವರೂಪದ ಆಳುವ ವರ್ಗಗಳ ತತ್ವಶಾಸ್ತ್ರಗಳನ್ನು ಆದರ್ಶವಾದ, ಅಧ್ಯಾತ್ಮವಾದ ಟೀಕಿಸಿ ಕಾರ್ಮಿಕವರ್ಗದ ವಿಮೋಚನೆಗೆ "ದ್ವಂದ್ವಮಾನ ಭೌತಿಕವಾದ" ತತ್ವಶಾಸ್ತ್ರವೇ ಸರಿಯಾದುದು ಎಂದು ವಿಷದವಾಗಿ ಸಮರ್ಥಿಸಿದರು. ಕಾರ್ಮಿಕ ವರ್ಗದ ರಾಜಕೀಯ ಪಾರ್ಟಿಯ ಮುಂದಾಳುಗಳೂ, ಕಾರ್ಯಕರ್ತರೂ, ಸದಸ್ಯರೂ ಅನಭಾವಿಗಳೂ "ದ್ವಂದ್ವಮಾನ ಭೌತಿಕವಾದ"ದ ಈ ಸಮರ್ಥನೆಯಿಂದ ತಮ್ಮ ಎಲ್ಲಾ ಸಂಶಯಗಳನ್ನು ಕಳೆದುಕೊಂಡರು. ಕ್ರಾಂತಿಯ ಪಥವನ್ನು ಇನ್ನೂ ದೃಢವಾಗಿ ತುಳಿಯಲು ಉಪಕ್ರಮಿಸಿದರು.

1905-1907ರ ಕ್ರಾಂತಿಯಲ್ಲಿ "ತನ್ನಿಂದ ತಾನೇ ಬೆಳೆದು ಬಂದ ಸೋವಿಯೆಟ್‌ಗಳು" ಪುನಃ ಸ್ಥಾಪಿತವಾದವು, [ಸೋವಿಯಟ್ ಎಂದರೆ ಕೂಟ, ರೈತರ ಸೋವಿಯಟ್, ಕಾರ್ಮಿಕರ ಸೋವಿಯಟ್, ಸೈನಿಕರ ಸೋವಿಯಟ್‌ಗಳು 1905-1907ರಲ್ಲಿ ರಷ್ಯಾದ್ಯಂತ ರಚಿಸಲ್ಪಟ್ಟಿದ್ದವು; ಈ ಸೋವಿಯಟ್‌ಗಳೇ ಕ್ರಾಂತಿಯು ಏರ್ಪಟ್ಟ ಸರಕಾರದ ಅಂಗಗಳಾಗಿದ್ದವು] ಕೃಷಿಕರ ಸೋವಿಯಟ್‌ಗಳು ಸಾವಿರಾರು ಸಂಖ್ಯೆಯಲ್ಲಿ ಸ್ಥಾಪಿಸಲ್ಪಟ್ಟು ಅಖಿಲ ರಷ್ಯನ್ ರೈತರ ಸೋವಿಯಟ್ ಫೆಡರೇಶನ್ ಕೂಡಾ ಸ್ಥಾಪಿಸಲ್ಪಟ್ಟಿತು

ಚಾರಿತ್ರಿಕವಾಗಿ 'ಮಾರ್ಕ್ಸ್‌ವಾದ'

ಆದರೆ ರಷ್ಯಾದ "ಪ್ರಜಾಸತ್ತಾತ್ಮಕ ಸಮಾಜವಾದಿ ಪಾರ್ಟಿ"ಯೊಳಗಣ ಬಿನ್ನತೆ ಮಾತ್ರ ಇನ್ನಷ್ಟು ತೀವ್ರವಾಯಿತು. ತಾತ್ವಿಕವಾಗಿಯೂ, ಪ್ರಾಯೋಗಿಕವಾಗಿಯೂ ಎಷ್ಟೋ ಕಾಲದಿಂದ ಪ್ರತ್ಯೇಕ ಪ್ರತ್ಯೇಕವಾಗಿ ವರ್ತಿಸುತ್ತಾ ಬಂದ, ಆದರೆ ಒಂದೇ ಪಾರ್ಟಿಯಲ್ಲಿದ್ದ, ಬೋಲ್‌ಶೆವಿಕ್ ಮತ್ತು ಮೆನ್‌ಶೆವಿಕರ ಗುಂಪುಗಳು "ಪರಿಹರಿಸಲಾರದ ವೈರುಧ್ಯ"ದ ಘಟ್ಟವನ್ನು ಮುಟ್ಟಿದವು. ರಷ್ಯನ್ ಸಮಾಜವಾದೀ ಪಾರ್ಟಿ ಸಂಘಟನಾತ್ಮಕವಾಗಿಯೂ ಬೇರೆ ಬೇರೆಯಾಯಿತು

ಹೀಗೆ ಕಾಂ| ಲೆನಿನರ ನೇತೃತ್ವದಲ್ಲಿ ಕಾರ್ಮಿಕ ವರ್ಗದ ನಿಜವಾದ ರಾಜಕೀಯ ಪಾರ್ಟಿಯಾಗಿರಸ್ಯಾದ ಕಮ್ಯುನಿಸ್ಟ್ ಪಾರ್ಟಿ (ಬೋಲ್ಶೆವಿಕ್)ಯು 1912 ರಲ್ಲಿ ಸ್ಥಾಪನೆಯಾಯಿತು.

1912–1917. ರಷ್ಯಾದಲ್ಲೂ ಯುರೋಪಿನಲ್ಲೂ ಕ್ರಾಂತಿಕಾರಿ ಕಾರ್ಮಿಕ ಚಳವಳಿಯು ಮೇಲ್ಮುಖವಾಗಿ ಮುನ್ನಡೆಯಲು ಆರಂಭವಾಯಿತು. ಕಾರ್ಮಿಕ ಚಳವಳಿಯು ಉದಯೋನ್ಮುಖವಾಗಿ ಬೆಳೆಯಿತು. 1907-12ರ ಕಾಲಾವಧಿಯಲ್ಲಿ ಸಾರ್ವತ್ರಿಕ ದಬ್ಬಾಳಿಕೆ, ಮರ್ಧನಕ್ಕೆ ಬಲಿಯಾಗಿ ತಾತ್ಕಾಲಿಕ "ಸ್ಥಗಿತ"ಗೊಂಡ ಕಾರ್ಮಿಕ ಚಳವಳಿ ರಷ್ಯಾದಲ್ಲಿ ಪುನಃ ಚೇತರಿಸಿಕೊಳ್ಳಲು ಆರಂಭವಾಯಿತು. ರಷ್ಯನ್ ಕಾರ್ಮಿಕರು ಪುನಃ ಮುಷ್ಕರಗಳ, ಹೋರಾಟಗಳ ದಾರಿಯನ್ನು ಹಿಡಿದರು. ಹತ್ತು ಹಲವಾರು ಬೇಡಿಕೆಗಳನ್ನು ಮಾಲಕ ವರ್ಗದ ಮುಂದಿಟ್ಟು ತೀವ್ರ ರೂಪದ ಹೋರಾಟಗಳನ್ನು ನಡೆಸಿದರು. ಸಾರ್ವತ್ರಿಕ ಮುಷ್ಕರಗಳನ್ನು ನಡೆಸುತ್ತಾ ಬಂದರು....ಅತೃಪ್ತಿಯು ರಷ್ಯನ್ ರೈತರನ್ನೂ, ಕೃಷಿ ಕೂಲಿಗಾರರನ್ನೂ, ಗ್ರಾಮಾಂತರ ಪ್ರದೇಶಗಳಲ್ಲಿ ಬಡಿದೆಬ್ಬಿಸಿತು ಹೆದರಿಕೆಯ ಸ್ಥಾನದಲ್ಲಿ ಧೈರ್ಯ ಬಂತು ಜನರ ಮನಸ್ಸಿನಲ್ಲಿ. ಹೆಚ್ಚೆಚ್ಚು ಜನರು ದೊಡ್ಡ ದೊಡ್ಡ ಪ್ರಮಾಣದಲ್ಲಿ ಕೇಳಿಕೆಗಳನ್ನು ಕೇಳುತ್ತಾ ಬೀದಿಗಿಳಿಯಲು ಆರಂಭಿಸಿದರು.

ಹಾಗೆಯೇ ಮಿಲಿಟರಿಗಳಲ್ಲೂ ಅತೃಪ್ತಿ ಬೆಳೆದ ಹಾಗೆ ಕ್ರಾಂತಿಕಾರಿ ಭಾವನೆ ತಿಳುವಳಿಕೆ ಹೆಚ್ಚಿದ ಹಾಗೆ ಸೈನಿಕರ ಸೋವಿಯೆತ್‌ಗಳು ಸ್ಥಾಪಿಸಲ್ಪಟ್ಟವು.

ಇದೇ ವೇಳೆ (1912—1917) ಯುರೋಪಿನಲ್ಲೂ ಬಂಡವಾಳಶಾಹಿ ಸಮಾಜ ವ್ಯವಸ್ಥೆಯಲ್ಲಿಯೇ ಕೆಲವೊಂದು ವಿಶಿಷ್ಟ ಬೆಳವಣಿಗೆಗಳುಂಟಾದವು.

ಇದೇ ಸಮಯದಲ್ಲಿ ಯುರೋಪಿನ ಬಂಡವಾಳಶಾಹಿ ರಾಷ್ಟ್ರಗಳಾದ ಇಂಗ್ಲೆಂಡು, ಫ್ರಾನ್ಸ್, ಜರ್ಮನಿ, ಬೆಲ್ಜಿಯಂ, ಇಟಲಿ ಮೊದಲಾದ ರಾಷ್ಟ್ರಗಳಲ್ಲಿ "ಬಂಡವಾಳ ಪದ್ಧತಿ"ಯು "ಸಾಮ್ರಾಜ್ಯಶಾಹಿ" ಪದ್ಧತಿಯಾಗಿ ಸಂಪೂರ್ಣವಾಗಿ ಬೆಳೆದಿತ್ತು. ಮತ್ತು ಇಡೀ ಭೂಲೋಕವನ್ನು ತಮ್ಮೊಳಗೆ ಹಂಚಿಕೊಂಡಿದ್ದವು. ಪುನಃ ಹಂಚಿಕೊಳ್ಳಲು ಪರಸ್ಪರ ಪೈಪೋಟಿ ನಡೆಸುತ್ತಿದ್ದವು.

ಇದೇ ಸಂದರ್ಭದಲ್ಲಿ ಲೋಕದ ಆರ್ಥಿಕ-ಸಮಾಜಿಕ ಪರಿಸ್ಥಿತಿಗಳಲ್ಲಿ ಉಂಟಾದ ಈ ಮಹತ್ವದ ಬೆಳವಣಿಗೆಯನ್ನು ಯುರೋಪಿನ ಎಲ್ಲಾ ಕಾರ್ಮಿಕ ವರ್ಗ ಹಾಗೂ ಸಮಾಜವಾದೀ ಪಕ್ಷಗಳೂ ಸರಿಯಾಗಿ ಗ್ರಹಿಸಿ ತಮ್ಮ ಹೋರಾಟದ ಕ್ರಾಂತಿಯ ಕಾರ್ಯಕ್ರಮವನ್ನು ನಿರೂಪಿಸಬೇಕೆಂದು ಲೆನಿನರು "ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ಪದ್ಧತಿಯ ಅತ್ಯುನ್ನತ ಘಟ್ಟ" ಎಂಬ ಮಹಾ ಗ್ರಂಥವನ್ನು ಬರೆದರು.

ಈ ಗ್ರಂಥದಲ್ಲಿ "ಸಾಮ್ರಾಜ್ಯಶಾಹಿ"ಯಾಗಿ ಬಂಡವಾಳ ಪದ್ಧತಿಯು ಬೆಳೆಯುವುದೆಂದರೆ ಅದರ ಸ್ವರೂಪದಲ್ಲಿ ಈ ಕೆಳಗಿನ ಅಂಶಗಳನ್ನು ಕಾಣುವುದು ಎಂದು ವಿವರಿಸಿದರು.

1. ಆರ್ಥಿಕ ಉತ್ಪಾದನೆಯಲ್ಲಿ ಗುತ್ತಿಗೆಗಳು—ಸಿಂಡಿಕೇಟ್, ಕಾರ್ಟೆಲ್, ಕೋರ್ಪರೇಶನುಗಳು—ಏರ್ಪಡುವುದು

2. ಈ ಗುತ್ತಿಗೆಗಳು ತಮ್ಮ ದೇಶದ ಸರಕಾರವನ್ನು ನೇರವಾಗಿ ನಡೆಸಲು ಆರಂಭಿಸುವುದು.

3. ಈ ಗುತ್ತಿಗೆಗಳು ಲೋಕದ ಗುತ್ತಿಗೆಗಳಾಗಿ ಲೋಕವನ್ನಿಡೀ ತಮ್ಮ ಆರ್ಥಿಕ ಪ್ರಭಾವಕ್ಕೆ ಒಳಪಡಿಸುವುದು.

4. ಈ ಗುತ್ತಿಗೆಗಳು ಲೋಕದಲೆಲ್ಲಾ ತಮ್ಮ ಬಂಡವಾಳವನ್ನು ರಫ್ತು ಮಾಡಿ ಅಲ್ಲಿ ತಮ್ಮ ಗುತ್ತಿಗೆಗಳನ್ನು ಸ್ಥಾಪಿಸಿ ಅತ್ಯಂತ ಅಧಿಕ ಶೋಷಣೆಯನ್ನು ನಡೆಸಿ ಅತ್ಯಂತ ಅಧಿಕ ಲಾಭ ಪಡೆಯುವುದು

5. ತಮ್ಮ ಸ್ವಂತ ದೇಶದ ಕಾರ್ಮಿಕ ವರ್ಗ-ಮಧ್ಯಮ ವರ್ಗದ ಒಂದು ವಿಶಿಷ್ಟ ವಿಭಾಗದೊಡನೆ ತಮ್ಮ "ಕೊಳ್ಳೆ ಲಾಭ"ವನ್ನು ಪಾಲುಮಾಡಿಕೊಂಡು ಕಾರ್ಮಿಕ ವರ್ಗ ಮತ್ತು ಮಧ್ಯಮ ವರ್ಗ ಕ್ರಾಂತಿಕಾರಿ ದಾರಿಯನ್ನು ತುಳಿಯದಂತೆ ಮಾಡುವುದು.

6. ಲೋಕವನ್ನೆಲ್ಲಾ ತಮ್ಮ ಪ್ರಭಾವದ ವಲಯಗಳಾಗಿ ಹಂಚಿಕೊಳ್ಳುವುದು; ಹೆಚ್ಚೆಚ್ಚು ಪ್ರದೇಶಗಳನ್ನು ತಮ್ಮ ಪ್ರಭಾವದ ಒಳಗೆ ತರಲು ಪ್ರಯತ್ನಿಸುವುದು, ತೀವ್ರ ಪೈಪೋಟಿ ನಡೆಸುವುದು.

7. ಲೋಕ ಮಹಾ ಯುದ್ಧಗಳಿಗೆ ತಯಾರು ಮಾಡುವುದು; ಯುದ್ಧಗಳನ್ನು ಮಾಡುವುದು.

ಕಾಂ| ಲೆನಿನರು ಲೋಕದ ಈ ಸ್ಥಿತಿಗಳನ್ನು ಪರಿಶೀಲಿಸಿ ಈ ಮಹಾ ಗ್ರಂಥವನ್ನು ಬರೆದು "ಒಂದು ಲೋಕ ಯುದ್ಧದ ಕಾರ್ಮೋಡಗಳು ಹರಡುತ್ತಾ ಇವೆ; ಮಹಾಯುದ್ಧ"ವಾಗಬಹುದೆಂದು ತಮ್ಮ ರಾಜಕೀಯ ಭವಿಷ್ಯತ್ ವಾಣಿಯನ್ನು ಘೋಷಿಸಿದರು.

2ನೇ ಕಾರ್ಮಿಕ ಅಂತರರಾಷ್ಟ್ರೀಯದ ಮುಂದಾಳುಗಳೆಲ್ಲರೂ ಕಾಂ| ಲೆನಿನರ ವಿಶ್ಲೇಷಣೆಯನ್ನು ತಾತ್ವಿಕವಾಗಿ ಒಪ್ಪಿದರು ಅಲ್ಲದೇ 2ನೇ ಕಾರ್ಮಿಕ ಅಂತರರಾಷ್ಟ್ರೀಯವು "ಯುದ್ಧ ಸಂಭವಿಸಿದರೆ ಆಯಾಯ ದೇಶದ ಕಾರ್ಮಿಕ ವರ್ಗವು ಆಯಾಯ ದೇಶದ ಬಂಡವಾಳ ವರ್ಗದ ಜತೆಯಲ್ಲಿ ನಿಲ್ಲಬಾರದೆಂದೂ, ಮಹಾಯುದ್ಧದ ಪದ್ಧತಿಯನ್ನು ತಮ್ಮ ತಮ್ಮ ರಾಜ್ಯಗಳಲ್ಲಿ "ಕ್ರಾಂತಿ" ಸಾಧಿಸಲು ಮುಂದಾಗಬೇಕೆಂದೂ ತೀರ್ಮಾನ ಗೈದಾಗ ಆ ತೀರ್ಮಾನವನ್ನು ಶಿರಸಾ ಒಪ್ಪಿದರು ಈ ಅಂತರರಾಷ್ಟ್ರೀಯದ ಮುಂದಾಳುಗಳು (1912ರಲ್ಲಿ)

ಆದರೆ, 1914ರಲ್ಲಿ 1ನೇ ಮಹಾಯುದ್ಧ ಸಂಭವಿಸಿದಾಗ ಮಾತ್ರ ಈ ಸಮಾಜವಾದೀ ಮುಂದಾಳುಗಳು 2ನೇ ಅಂತರರಾಷ್ಟ್ರೀಯದ ನಿರ್ಣಯವನ್ನು ಬದಿಗೊತ್ತಿ ತಮ್ಮ ತಮ್ಮ ದೇಶದ ಬಂಡವಾಳ ವರ್ಗಗಳ ಬಾಲಬಡುಕರಾದರು. "ಪಿತೃ ದೇಶದ ರಕ್ಷಣೆ" ಎಂಬ ಘೋಷಣೆಯಡಿಯಲ್ಲಿ ಒಂದು ದೇಶದ

ಕಾರ್ಮಿಕ ವರ್ಗವು ಇನ್ನೊಂದು ದೇಶದ ಕಾರ್ಮಿಕ ವರ್ಗದೊಡನೆ ಹೋರಾಡಲು ಆರಂಭಿಸಿದರು

ಆದರೆ, ಕಾಂ। ಲೆನಿನರು ಮಾತ್ರ ರಷ್ಯನ್ ಬೋಲ್ಶೆವಿಕ್ ಪಾರ್ಟಿಯನ್ನೂ 3ನೇ ಅಂತರರಾಷ್ಟ್ರೀಯದ ಕ್ರಾಂತಿಕಾರಿ ತೀರ್ಮಾನವನ್ನೂ ತನ್ನ ದೇಶದಲ್ಲಿ ಜಾರಿಗೊಳಿಸಲು ಯೋಜನೆ ಹಾಕಿದರು.

"ಸಾಮ್ರಾಜ್ಯಶಾಹಿಗಳ ಲೋಕ ಬಂಧನವನ್ನು ಅದು ಅತ್ಯಂತ ಬಲಹೀನವಾದ ಕಡೆಯಲ್ಲಿ-ರಾಜ್ಯದಲ್ಲಿ-ಒಡೆದು ಹಾಕೋಣ'' ಎಂದು ಘೋಷಿಸಿದರು.

ನಡೆದು ಬಂದ ದಾರಿ

—ಕಾಂ. ಪಿ. ರಾಮಚಂದ್ರರಾವ್

1917 ಫೆಬ್ರವರಿ ಕ್ರಾಂತಿ

ರಷ್ಯದಲ್ಲಿ ಜನತೆ ಯುದ್ಧವಾಗುತ್ತಿದ್ದಾಗ ತತ್ತರಿಸಿ ಹೋಗಿದ್ದರು. ಆರ್ಥಿಕ ಸಂಪೂರ್ಣವಾಗಿ ಕುಸಿದು ಬಿದ್ದಿತ್ತು. ಉತ್ತಮ ಪುತ್ರರನ್ನು ಲಕ್ಷಾಂತರ ಸಂಖ್ಯೆಯಲ್ಲಿ ರಣ ಭೂಮಿಯಲ್ಲಿ ಕಳೆದುಕೊಳ್ಳುತ್ತಿರುವಾಗ ದೇಶದೊಳಗೆ ಆಹಾರ ಮತ್ತಿತರ ಜೀವನೋಪಾಯಯುಕ್ತ ವಸ್ತುಗಳ ಬೆಲೆಗಳು ವಿಪರೀತ ಏರಿದವು; ಅವುಗಳು ಮಾರ್ಕೆಟನಿಂದಲೇ ನಾಪತ್ತೆಯಾಗಿ ಬ್ಲಾಕ್ ಮಾರ್ಕೆಟು ಇಡೀ ದೇಶದಲ್ಲಿ ಹರಡಿ ಜನತೆಯನ್ನು ತೀರಾ ಸುಲಿಗೆಗೆ ಒಳಪಡಿಸಿದರು.

ರೈತಾಪಿ ಜನತೆಯ ಎಲ್ಲಾ ಆಶೆ ಆಕಾಂಕ್ಷೆಗಳೂ ಕುಸಿದು ಬಿದ್ದುವು. ಜನತೆ ಸಾರ್ವತ್ರಿಕವಾಗಿ ಹೋರಾಟ ಮಾಡುವುದೊಂದೇ ಹಾದಿ ಎಂದು ತಿಳಿದು ಜಾರ್ ಶಾಹಿ ವಿರೋಧ ತೀವ್ರ ಹೋರಾಟವನ್ನು ಆರಂಭಿಸಿದರು.

"ಭೂಮಿ, ಆಹಾರ, ಶಾಂತಿ''ಎಂಬ ಘೋಷಣೆಗಳು ದೇಶದಾದ್ಯಂತವಾಗಿ— ಸೈನಿಕ ರಂಗದಲ್ಲೂ, ಸೈನಿಕರ ಮಧ್ಯದಲ್ಲಿಯೂ, ಕಾರ್ಮಿಕರ ಮಧ್ಯೆಯೂ, ರೈತರ ಮಧ್ಯೆಯೂ—ಮೊಳಗಿದವು. ಬೊಲ್ಶೆವಿಕ್ ಪಾರ್ಟಿ ಈ ಘೋಷಣೆಯನ್ನು ವಿಸ್ತಾರವಾಗಿ ಹರಡಿ ಈ ಘೋಷಣೆಗಳ ಜ್ಯಾರಿ ಮಾಡುವಿಕೆ ಎಂದರೆ ಜಾರ್ ಶಾಹಿಯನ್ನು ಅಳಿಸುವುದೆಂದರ್ಥ.

ಸಭೆ ಮೆರವಣಿಗೆ, ಮನವಿ, ಮುಷ್ಕರ, ಸಾರ್ವತ್ರಿಕ ಮುಷ್ಕರ, ಘರ್ಷಣೆ ಹೆಚ್ಚಿದವು.

ಜಾರ್ ಶಾಹಿ ಮಾತ್ರ ಯಾವ ಬೇಡಿಕೆಗೂ ಮನ್ನಣೆ ಈಯಲಿಲ್ಲ. ಶಾಂತಿಯುತವಾಗಿ ಮನವಿ ಕೊಡಲು ಬಂದ ಜನಸಾಮಾನ್ಯರ ಸಭೆ-ಮೆರವಣಿಗೆಗಳ ಮೇಲೆ ತುಪಾಕಿನ ಸುರಿಮಳೆಯನ್ನೇ ಸುರಿಸಲು ಆರಂಭಿಸಿದರು. ಲಕ್ಷಾಂತರ ಮಂದಿ ಯುದ್ಧರಂಗದಲ್ಲಿ ಮಡಿದಂತೆ ದೇಶದ ಒಳಗೂ ಸಾವಿರಾರು ಮಂದಿ "ಭೂಮಿ, ಆಹಾರ, ಶಾಂತಿ'' ಎಂಬ ಘೋಷಣೆಗಳನ್ನು ಹಾಕಿ ಮಡಿದರು.

ಜನ ಜಾರ್ ಶಾಹಿ ವಿರುದ್ಧ ದಂಗೆ ಎದ್ದಿತು. ದಂಗೆ ಸಾರ್ವತ್ರಿಕವಾಯಿತು. ಹೋರಾಟ ಕ್ರಾಂತಿಯ ರೂಪಾಂತರ ಹೊಂದಿತು ಜಾರ್ ಶಾಹಿ ಪದ್ಧತಿಯನ್ನು ಜನ ಕಿತ್ತೊಗೆಯಿತು. ಜಾರ್ ನಿಕೋಲಸ್‌ರನ್ನು ಜನ ಗಲ್ಲಿಗೇರಿಸಿದರು.

ರಾಜ್ಯಾಧಿಕಾರ ಜನರ ಕೈಗೆ ಸೇರಿತು.

1917 ಫೆಬ್ರವರಿಯಿಂದ
1917 ನವಂಬರ್ ವರೆಗೆ
ರಷ್ಯನ್ ಜನತೆಯ ಕ್ರಾಂತಿಯು ಜಯಪ್ರದವಾಯಿತು.

ರಷ್ಯನ್ ಜಾರ್‌ಶಾಹಿ ಸಾಮ್ರಾಜ್ಯ ಅಧಿಕಾರವು ಕುಸಿಯಿತು.

ಅಧಿಕಾರವು ಜನತೆಯ ಕೈಸೇರಿತು.

ಆದರೆ ಇದೇವೇಳೆ ಮೆನ್ಶವಿಕರ ಪಾರ್ಟಿ-ಸಮಾಜವಾದೀ ಕ್ರಾಂತಿಕಾರೀ ಪಾರ್ಟಿಗಳು ಬಂಡವಾಳಶಾಹೀ—ಪಾಳೆಯಗಾರೀ ಪಾರ್ಟಿಗಳಾದ ಕೆಡೆಟ್, ಮೊದಲಾದವರೊಡನೆ ಜತೆಸೇರಿ ಬೊಲ್ಶೆವಿಕರನ್ನು ಬಿಟ್ಟು "ನಡುಗಾಲ ಸರಕಾರ"ವನ್ನು ಏರ್ಪಡಿಸಿದರು.

ಸಮಾಜವಾದೀ ಕೆರೆನ್ಸಿಸ್ಕಿ ನಡುಗಾಲ ಸರಕಾರವು ಏರ್ಪಟ್ಟಿತು.

ಜನತೆಯ ಕೈಯಲ್ಲಿ-ಸೋವಿಯಟ್‌ಗಳಲ್ಲಿ-ಶಸ್ತ್ರಗಳು ಇದ್ದು ಅಧಿಕಾರವು ದೇಶದಲ್ಲಿ ''ನಡುಗಾಲ ಸರಕಾರದ ಕೈಯಲ್ಲೂ, ಜನತೆಯ ಸೋವಿಯೆಟ್‌ಗಳಲ್ಲೂ'' ಸೇರಿತು.

ಕೆರೆನ್ಸಿಸ್ಕಿ ಸರಕಾರವು "ಶಾಂತಿ, ಆಹಾರ, ಭೂಮಿ" ಘೋಷಣೆಯಲ್ಲಿಯೇ ಅಧಿಕಾರಕ್ಕೆ ಬಂದರೂ, "ಯಾವ ಜಾರ್ ಶಾಹಿ ಅಧಿಕಾರವನ್ನು ಕಿತ್ತೊಗೆದರೋ ಅದೇ ಜಾರ್ ಶಾಹಿ ಧೋರಣೆಯನ್ನು ಮುಂದುವರಿಸಿದರು" —ಶಾಂತಿಯನ್ನು ಮಾತ್ರ ತರಲು ಮುಂದಾಗಲಿಲ್ಲ. ಸೈನ್ಯಗಳನ್ನು ಹಿಂದಕ್ಕೆ ತರಲು ತಯಾರಾಗಲಿಲ್ಲ. ಭೂಮಿ ರೈತಾಪಿ ಜನತೆಗೆ ಕೊಡಲು ತಯಾರಾಗಲಿಲ್ಲ.

"ಘಟನಾ ಸಮಿತಿಗೆ ಚುನಾವಣೆ ನಡೆಸಿ, ಕ್ರಮೇಣ ಘಟನಾ ಸಮಿತಿ ರಚಿಸಿ ದೇಶದಲ್ಲಿ ಹೊಸ ಘಟನೆಯನ್ನು ರಚಿಸಿ ಜನರ ಆಶೆ ಆಕಾಂಕ್ಷೆಗಳನ್ನು ನೆರವೇರಿಸಲು ನಾವು ಕ್ರಮೇಣ ಪ್ರಯತ್ನಿಸುವೆವು'' ಎಂದು ದಿನ ದೂಡುವ ಧೋರಣೆಯನ್ನು ಪ್ರಚಾರ ಮಾಡಲು ಆರಂಭಿಸಿದರು ಈ ಕೆರೆನ್ಸಿಸ್ಕಿ ನಡುಗಾಲ ಸರಕಾರ

ಈ ಧೋರಣೆಯನ್ನು ತೀವ್ರವಾಗಿ ವಿರೋಧಿಸಬೇಕೆಂದು ಕಾ। ಲೆನಿನರ ನೇತೃತ್ವದಲ್ಲಿ ರಷ್ಯನ್ ಬೋಲ್‌ಶೆವಿಕ್ ಪಾರ್ಟಿ ಕರೆಕೊಟ್ಟಿತು.

ಆಗ ಬೊಲ್‌ಶೆವಿಕರ ಮೇಲೆ ದಾಳಿ ನಡೆಸಲು ಕೆರೆನ್ಸಿಸ್ಕಿ ಸರಕಾರ ಹುಕುಂ ಹೊರಡಿಸಿತು. ಪುನಃ ಬೊಲ್‌ಶೆವಿಕರು ತಲೆತಪ್ಪಿಸಿ ಕೆಲಸ ಮಾಡಬೇಕಾಗಿ ಬಂತು.

ಅಲ್ಲದೆ, ಜನತೆಯ ಕೈಯಲ್ಲಿ ಶಸ್ತ್ರಗಳಿದ್ದರೆ, ಸೋವಿಯಟ್‌ಗಳಲ್ಲಿ ಶಸ್ತ್ರ ಸಜ್ಜಿತ ಅಧಿಕಾರ ಉಳಿದರೆ, ತಮ್ಮ ಸರಕಾರಕ್ಕೆ 'ಕುತ್ತು' ಎಂದು ಬಗೆದು 'ಕೆರೆನ್ಸಿಸ್ಕಿ' ಸರಕಾರವು ಜನರನ್ನು ನಿಶ್ಶಸ್ತ್ರೀಕರಿಸಲು, ಸೋವಿಯಟ್‌ಗಳಿಂದ ಬಂದೂಕುಗಳನ್ನೂ ಕಿತ್ತುಕೊಳ್ಳಲು ಕ್ರಮವಹಿಸಿತು ಕೆರೆನ್ಸಿಸ್ಕಿ ಸರಕಾರ.

ಆದರೆ, ಬೋಲ್‌ಶೆವಿಕರು ಈ ಸರಕಾರದ ಕ್ರಮವನ್ನು ದ್ವೇಷಿಸಿದರು. ದೇಶದಲ್ಲಿ ಪುನಃ ಬಿಗುತನದ ವಾತಾವರಣ ಹೆಚ್ಚಿತು.

ಪುನಃ ಒಂದು ಕ್ರಾಂತಿಯಾಗಿ ಜನತೆಯ ಸೋವಿಯಟ್‌ಗಳ ಅಧಿಕಾರ ಸ್ಥಾಪನೆಯಾಗಬೇಕು ಎಂಬ ಘೋಷಣೆಯನ್ನು ಕೊಟ್ಟಿತು ಬೊಲ್‌ಶೆವಿಕ್ ಪಾರ್ಟಿ.

ಕಾ। ಲೆನಿನರು ಕೆರೆನ್ಸಿಸ್ಕಿ ಸರಕಾರ, 'ಸೋವಿಯಟ್ ಸರಕಾರವೊಂದೇ ನಿಜವಾದ ಸರಕಾರ, ಎರಡು ಅಧಿಕಾರವಿರಲು ಸಾಧ್ಯವಿಲ್ಲ' ಎಂದು ಘೋಷಿಸಿದರು.

ಶಾಂತಿಯಿಂದ ಈ ಸೋವಿಯೆತ್ ಅಧಿಕಾರ ಸ್ಥಾಪನೆಗೆ ಸಹಾಯಕವಾಗಿ ವರ್ತಿಸಬೇಕೆಂದು ಕರೆಕೊಟ್ಟರು.

ಆದರೆ ಬಂಡವಾಳಶಾಹಿ ಜಮೀನ್ದಾರಿ ರಾಜಕೀಯ ಪಾರ್ಟಿಯಾದ ಕೆಡೆಟ್ ಪಾರ್ಟಿಯ ಮತ್ತಿತರ ಜಾರ್‌ಶಾಹಿ ಗುಂಪುಗಳ ಪ್ರಭಾವಕ್ಕೆ ಒಳಗಾದ ಮೆನ್‌ಶೆವಿಕ್–ಸಮಾಜವಾದೀ ಕ್ರಾಂತಿಕಾರಿ ಪಕ್ಷಗಳ ಕೆರೆನ್ಸಿಸ್ಕಿ ಸರಕಾರವು ಮಾತ್ರ ಬೊಲ್‌ಶೆವಿಕರ ಈ ಬೇಡಿಕೆಗೆ ಮನ್ನಣೆ ಕೊಡಲಿಲ್ಲ.

ತಮ್ಮ ಧೋರಣೆಯನ್ನೇ ಮುಂದುವರಿಸಿದರು.

ಆಗ ಬೊಲ್ಶೆವಿಕ್ ಪಾರ್ಟಿಯ ಕೇಂದ್ರ ಸಮಿತಿ ಸೇರಿತು. ಆ ಸಭೆಯಲ್ಲಿ 'ಲೆನಿನರ ಎಪ್ರಿಲ್ ಮಹಾಪತ್ರ'ವು ಓದಿ ಚರ್ಚಿಸಲ್ಪಟ್ಟಿತು.

ಲೆನಿನರು ಈ ಎಪ್ರಿಲ್ ಪತ್ರದಲ್ಲಿ ಕ್ರಾಂತಿಯ ಪರಿಸ್ಥಿತಿ ಎಂದರೇನು? ಎಂಬುದನ್ನು ವಿವರಿಸಿ ಈಗ ರಷ್ಯಾದಲ್ಲಿ ಅಂತಹ ಪರಿಸ್ಥಿತಿ ಇದೆಯೆಂದೂ ಬೊಲ್ಶೆವಿಕರು ಈ ಬಾಹ್ಯ ಪರಿಸ್ಥಿತಿಯನ್ನು ಉಪಯೋಗಿಸಿ ಕ್ರಾಂತಿ ನಡೆಸಲು ತಯಾರಿ ನಡೆಸಬೇಕೆಂದು ಕರೆಕೊಟ್ಟರು.

ಕ್ರಾಂತಿಯುಪರಿಸ್ಥಿತಿಯ ಲಕ್ಷಣಗಳು:

1. ಆಳುವ ವರ್ಗಗಳ ಬಗ್ಗೆ ಆಳುವ ಸರಕಾರದ ಮೇಲೆ ಜನರು ಸಂಪೂರ್ಣ ವಿಶ್ವಾಸವನ್ನು ಕಳೆದುಕೊಂಡಿದೆ.

2. ಆಳುವ ವರ್ಗಗಳಿಗೆ ಜನರ ಮೇಲೆ ತಮ್ಮ ಅಧಿಕಾರವನ್ನು ಯಾವುದೇ ರೀತಿಯಲ್ಲಿ ನಡೆಸಿಕೊಂಡು ಹೋಗಲು ಸಾಧ್ಯವಾಗದೇ ಇರಬೇಕು?

3. ಜನರಿಗೆ ಈ ಸರಕಾರದ ಸ್ಥಾನದಲ್ಲಿ ಈ ಅಧಿಕಾರದ ಸ್ಥಾನದಲ್ಲಿ ಇನ್ನಾವ ಸರಕಾರ-ಅಧಿಕಾರ ಬರಬೇಕೆಂಬುದರ ಕುರಿತು ಸ್ಪಷ್ಟ ಅಭಿಪ್ರಾಯವಿರಬೇಕು.

4. ಅದಕ್ಕಾಗಿ ಜನತೆ ಪ್ರಾಣಭಯವಿಲ್ಲದೆ ಮಿಲಿಯ ಮಿಲಿಯ ಸಂಖ್ಯೆಯಲ್ಲಿ ಅಲೆ ಅಲೆಯಾಗಿ ಶಸ್ತ್ರಸಹಿತವಾಗಿ ಹೋರಾಟವನ್ನು ನಡೆಸಿ ''ಹಳೇ ಅಧಿಕಾರವನ್ನು ಸರ್ವನಾಶ ಗೈದು, ಹೊಸ ಅಧಿಕಾರ"ವನ್ನು ಸ್ಥಾಪಿಸಲು ಮುಂದಾಗುವುದು.

ಬೊಲ್‌ಶೆವಿಕ್ ಪಾರ್ಟಿ ಬಲಿಷ್ಠವಾಗಿ ಉಕ್ಕಿನ ಶಿಸ್ತುಳ್ಳ ಜನತೆಯ ಪಾರ್ಟಿಯಾಗಿ ಬೆಳೆದಿತ್ತು. ಎಲ್ಲಾ ಹಂತಗಳಲ್ಲಿ ಕ್ರಾಂತಿಕಾರಿ ತಯಾರಿಯನ್ನು ನಡೆಸಿತ್ತು.

1917 ಅಕ್ಟೋಬರ್ ಕ್ರಾಂತಿ— ಸೋವಿಯೆಟ್ ಅಧಿಕಾರ ಸ್ಮರಣೆ

ಕಾಂ। ಲೆನಿನರು ರಷ್ಯದೊಳಗೆ ಬಂದರು. ಕೇಂದ್ರ ಸಮಿತಿಯು ಪುನಃ ಸಭೆ ಸೇರಿತು. ಕ್ರಾಂತಿ ಹೋರಾಟ ರೂಪರೇಷೆಗಳು ಅಂಗೀಕರಿಸಲ್ಪಟ್ಟಿತು. ಕ್ರಾಂತಿಯ ಮುಂದಾಳುತ್ವವನ್ನು ಲೆನಿನರೇ ಕೈಗೆತೆಗೆದುಕೊಂಡರು.

ಹತ್ತು ದಿನಗಳಲ್ಲಿ ನಡುಗಾಲ ಸರಕಾರದ ಮುಖ್ಯ ಸೈನ್ಯಗಳು ಸೋಲಿಸಲ್ಪಟ್ಟವು; ಅಧಿಕಾರ ಸ್ಥಾನಗಳು ಬೊಲ್ಶೆವಿಕ್ ಸೋವಿಯೆಟ್ ಸೈನ್ಯಗಳ ಕೈಸೇರಿತು.

ಕ್ರಾಂತಿಕಾರಿ ಸೋವಿಯೆತ್ ಸರಕಾರವು ರಚಿಸಲ್ಪಟ್ಟಿತು.

ಕ್ರಾಂತಿಯ ಹಿಂದೆಯೂ, ಕ್ರಾಂತಿಯ ಅನಂತರ ನಡೆದ ಅಖಿಲ ರಷ್ಯನ್ ಸೋವಿಯತ್‌ಗಳ ಫೆಡರೇಶನಿನಲ್ಲಿ ಮೆನ್‌ಶೆವಿಕರೂ-ಸಮಾಜವಾದೀ ಕ್ರಾಂತಿಕಾರಿಗಳೂ ಕಿತ್ತೊಗೆಯಲ್ಪಟ್ಟ ಬೊಲ್ಶೆವಿಕರು ಅಧಿಕಾರಕ್ಕೆ ಚುನಾಯಿಸಲ್ಪಟ್ಟರು.

ಕಾಂ। ಲೆನಿನರು ಸೋವಿಯೆತ್ ರಾಜ್ಯದ ಪ್ರಥಮ ಪ್ರಧಾನಿಯಾದರು. ಎಲ್ಲಾ ಭೂಮಿಯು ಜನತೆಯ, ಸರಕಾರದ ಸಾರ್ವಜನಿಕ ಸೊತ್ತಾಯಿತು; ಭೂಮಿಯ ಮೇಲಿದ್ದ ಸಾವಿರಾರು ವರ್ಷಗಳ ಖಾಸಗಿ ಒಡೆತನವು ನಿರ್ಮೂಲವಾಯಿತು. ಅಂದರೆ, ಭೂಮಿಯು ಸೋವಿಯತ್‌ಗಳ ಸೊತ್ತಾಯಿತು.

ಎಲ್ಲಾ ಕಾರ್ಖಾನೆಗಳು—ಉತ್ಪಾದನಾ ಸಾಧನೆಗಳು—ಕಾರ್ಮಿಕರ ಸರಕಾರದ ಅಧಿಕಾರಕ್ಕೆ ಸೇರಿದವು. ಕಾರ್ಖಾನೆಗಳ ಮೇಲೆ, ಉತ್ಪಾದನಾ ಸಾಧನೆಗಳ ಮೇಲೆ ಬಂಡವಾಳಶಾಹಿಗಳಿಗೆ ಸಾಮ್ರಾಜ್ಯಶಾಹಿಗಳಿಗೆ ಇದ್ದ ಖಾಸಗೀ ಹಕ್ಕು ನಿರ್ಮೂಲನವಾಯಿತು.

ವಿದ್ಯಾಭ್ಯಾಸ ಸಾರ್ವತ್ರಿಕ ಧರ್ಮಾರ್ಥವಾಯಿತು. ಆಸ್ಪತ್ರೆಗಳು ಧರ್ಮಾರ್ಥವಾಯಿತು. ಡಾಕ್ಟರುಗಳ ಸೇವೆ ಸಾಮಾಜೀಕರಣಗೊಂಡಿತು.

ಸಾಮ್ರಾಜ್ಯಶಾಹಿಗಳ, ಮೆನ್‌ಶೆವಿಕ್-ಸಮಾಜವಾದೀ ಕ್ರಾಂತಿಕಾರಿಗಳ, ಬಂಡವಾಳಶಾಹಿಗಳ, ಪುಟ್ಟ ಬಂಡವಾಳಶಾಹಿಗಳ, ಹಿಂದಿನ ಜಾರ್‌ಶಾಹಿ ಅತಿ ಶೇಷ ಶಕ್ತಿಗಳ "ಕ್ರಾಂತಿ ವಿರೋಧಿ" "ಪ್ರತಿ ಕ್ರಾಂತಿ" ಶಕ್ತಿಗಳನ್ನು ನಿಷ್ಕರುಣೆಯಿಂದ ಹಲವು ವರ್ಷಗಳ ಕಾಲ ಹೋರಾಡಿ ಸೋವಿಯತ್ ಅಧಿಕಾರ ಚಿರವಾಯಿತು.

ಪ್ರಪಂಚದ ಪ್ರಥಮ ಕಾರ್ಮಿಕ ವರ್ಗದ ಸರ್ವಾಧಿಕಾರವು ಕೆಂಪುಸೈನ್ಯದ ಸಹಾಯದಿಂದ ಉಳಿಯಿತು, ಬಾಳಿ ಬೆಳೆಯಿತು.

1919ರಲ್ಲಿ ಕಾಂ। ಲೆನಿನರ ನೇತೃತ್ವದಲ್ಲಿ ಮಾರ್ಕ್ಸವಾದಿ ಕ್ರಾಂತಿಕಾರಿ ತತ್ವಗಳಿಗೆ ಬದ್ಧರಾಗಿರಲು ಕಂಕಣಬದ್ಧರಾದ ತಮ್ಮ ತಮ್ಮ ದೇಶಗಳಲ್ಲಿ ಸಶಸ್ತ್ರ ಕ್ರಾಂತಿಗಳನ್ನೂ ನಡೆಸಿ ಕ್ರಾಂತಿಯ ಅಧಿಕಾರವನ್ನು ಸ್ಥಾಪಿಸುವ ಪ್ರತಿಜ್ಞೆಯನ್ನು ಗೈಯಲು ತಯಾರಿದ್ದ ಕಾರ್ಮಿಕ ವರ್ಗದ ಮೂರನೇ ಅಂತರರಾಷ್ಟ್ರೀಯವು ಸ್ಥಾಪಿಸಲ್ಪಟ್ಟಿತು.

ಏಷ್ಯಾ, ಆಫ್ರಿಕ, ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳಲ್ಲಿ ಕಮ್ಯುನಿಸ್ಟ್ ಪಾರ್ಟಿಗಳು ಸ್ಥಾಪಿಸಲ್ಪಟ್ಟು ಭಾರತದಲ್ಲಿ 1921ರಲ್ಲಿ ಸ್ಥಾಪಿಸಲ್ಪಟ್ಟಿತು—ಭಾರತ ಕಮ್ಯುನಿಸ್ಟ್ ಪಾರ್ಟಿ.

ರಷ್ಯಾದಲ್ಲಿ 1919–1924–25ರ ವರೆಗೆ ನಡೆದ ಪ್ರತಿಕ್ರಾಂತಿ ಶಕ್ತಿಗಳ ಪಿತೂರಿಯನ್ನು ಕೆಂಪು ಸೈನ್ಯವು ಸೋಲಿಸಿದಂತೆ, ಅದೇ ವೇಳೆ ದೇಶದ ಆರ್ಥಿಕವನ್ನು ನಾಶಮಾಡಲು ಪ್ರಯತ್ನಿಸಿದ–ಕಾರ್ಮಿಕ–ರೈತ–ಮಧ್ಯಮ ವರ್ಗದ ರಾಜ್ಯವು ನಡೆಯದಂತೆ ಮಾಡಲು ಪಿತೂರಿ ಮಾಡಿದ ಶಕ್ತಿಗಳನ್ನು ರಷ್ಯನ್ ಜನಸಾಮಾನ್ಯರು ಸೋಲಿಸಿದರು.

ಡಾಕ್ಟರರು ಪಿತೂರಿ ಮಾಡಿದಾಗ ನರ್ಸುಗಳು, ಕಂಪೌಂಡರುಗಳು ಆ ಪಿತೂರಿಯನ್ನು ಸೋಲಿಸಿದರು.

ಪ್ರೊಫೆಸರರು ಪಿತೂರಿ ನಡೆಸಿದಾಗ ವಿದ್ಯಾರ್ಥಿಗಳು ಆ ಪಿತೂರಿಯನ್ನು ಸೋಲಿಸಿದರು.

ಇಂಜಿನಿಯರರು ಪಿತೂರಿ ನಡೆಸಿದಾಗ ಮೆಕಾನಿಕ್‌ಗಳು ತಾಂತ್ರಿಕ ಕೆಲಸಗಾರರು ಆ ಪಿತೂರಿಯನ್ನು ಸೋಲಿಸಿದರು.

ಪ್ರೊಫೆಸರರು ಪಿತೂರಿ ನಡೆಸಿದಾಗ ವಿದ್ಯಾರ್ಥಿಗಳು ಆ ಪಿತೂರಿಯನ್ನು ಸೋಲಿಸಿದರು.

ಇಂಜಿನಿಯರರು ಪಿತೂರಿ ನಡೆಸಿದಾಗ ಮೆಕಾನಿಕ್‌ಗಳು ತಾಂತ್ರಿಕ ಕೆಲಸಗಾರರು ಆ ಪಿತೂರಿಯನ್ನು ಸೋಲಿಸಿದರು.

ಕಾರ್ಮಿಕರ-ರೈತರ-ನೌಕರರ-ದುಡಿಯುವ ಜನತೆಯ ಪ್ರಥಮ ಸೋವಿಯತ್ ಸರಕಾರ ಸ್ಥಿರವಾಗಿ ಸ್ಥಾಪಿಸಲ್ಪಟ್ಟಿತು. ಯೋಜನಾಬದ್ಧ ಆರ್ಥಿಕ ಪುನರ್‌ರಚನೆಯ ಕಾರ್ಯವು ಯಶಸ್ವಿಯಾಗಿ ಮುನ್ನಡೆಯಿತು.

(ಮುಗಿಯಿತು)

ಎಸ್.ಎಫ್.ಐ. ಚಟುವಟಿಕೆಗಳು

ಧಾರವಾಡ :

ಶಾಲಾ ನೌಕರರ ಹೋರಾಟಕ್ಕೆ ಎಸ್. ಎಫ್. ಐ. ಬೆಂಬಲ

31-2-1982ರ ಸೋಮವಾರದಿಂದ ಕರ್ನಾಟಕ ರಾಜ್ಯ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರು ತಮ್ಮ ಕೇಂದ್ರ ಸಮಿತಿಯು ಕರೆಯ ಮೇರೆಗೆ ಒಂದು ವಾರದ ಸರದಿ ಉಪವಾಸ ಸತ್ಯಾಗ್ರಹ ಮಾಡುತ್ತ ತಮ್ಮ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸುತ್ತಲಿದ್ದಾರೆ. ಇವರ ನ್ಯಾಯಯುತವಾದ ಬೇಡಿಕೆಗಳನ್ನು ಸರಕಾರ ಬೇಗನೆ ಈಡೇರಿಸದಿದ್ದಲ್ಲಿ ವಿದ್ಯಾರ್ಥಿಗಳು ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ. ಕಾರಣ ಕಾಂಗ್ರೆ ಆಳ್ವಿಕೆಯಿಂದ ಬೇಸತ್ತ ಜನ ಜನತಾರಂಗವನ್ನು ಆರಿಸಿ ತಂದು ತಮ್ಮ ಸಮಸ್ಯೆ ಪರಿಹರಿಸಿಕೊಳ್ಳಲು ಯತ್ನಿಸಿದ್ದಾರೆ. ಇದನ್ನು ತಿಳಿದು ಜನತಾ ಸರಕಾರ ಪ್ರಜೆಗಳ ಸಮಸ್ಯೆಗಳ ಸಲುವಾಗಿ ಹೋರಾಟ ಪ್ರಾರಂಭವಾಗುವುದಕ್ಕಿಂತ ಮುಂದೆ ಅವರನ್ನು ಚರ್ಚೆಗೆ ಕರೆದು ಅವರ ಸಮಸ್ಯೆಯನ್ನು ಪರಿಹರಿಸಬೇಕೆಂದು ಈ ಮೂಲಕ ಎಸ್ ಎಫ್ ಐ ಸರಕಾರದವರನ್ನು ಒತ್ತಾಯ ಪಡಿಸುತ್ತದೆ. ಇನ್ನು ಕೆಲವೇ ದಿನಗಳಲ್ಲಿ ರಾಜ್ಯ ಖಾಸಗಿ ಮಾಧ್ಯಮಿಕ ಶಾಲಾ ನೌಕರರ 28 ಬೇಡಿಕೆಗಳನ್ನು ಜನತಾರಂಗ ಸರಕಾರ ಈಡೇರಿಸಬೇಕು. ಉಳಿದ ರಾಜ್ಯ ಸರಕಾರಿ ನೌಕರರ ನಿವೃತ್ತಿಯ ವಯಸ್ಸು 58 ಇದೆ. ದೇವರಾಜ ಅರಸರು ತಮ್ಮ ವೈಯಕ್ತಿಕ ಹಿತಾಸಕ್ತಿಯಿಂದ ನಿವೃತ್ತಿ ವಯಸ್ಸನ್ನು 55 ವರ್ಷಕ್ಕೆ ಇಳಿಸಿದ್ದಾರೆ ಕಾರಣ ನೀವು ಇತರ ರಾಜ್ಯಗಳಂತೆ ನಿವೃತ್ತಿ 58ಕ್ಕೆ ಏರಿಸಬೇಕೆಂದು ಎಸ್. ಎಫ್ ಐ ಧಾರವಾಡ ಜಿಲ್ಲಾ ಘಟಕ ಒತ್ತಾಯಿಸುತ್ತದೆ.

ನರಗುಂದ ನವಲಗುಂದ ರೈತರ ಮೇಲಿನ ಖಟ್ಲೆಗಳನ್ನು ಹಿಂದಕ್ಕೆ ತೆಗೆದುಕೊಂಡದಕ್ಕೆ ಸರಕಾರವನ್ನು ಎಸ್. ಎಫ್ ಐ ಅಭಿನಂದಿಸುತ್ತದೆ. ಅದರಂತೆ ಆಡಳಿತ ಭಾಷೆ ಕನ್ನಡ ಮಾಡಿದಕ್ಕೆ ಅಭಿನಂದಿಸಿದೆ ಕ್ಯಾಪಿಟೇಶನ್ ಡೊನೇಶನ್ ಫೀಗಳನ್ನು ರದ್ದು ಮಾಡಬೇಕು ಹಾಗೂ ಖಾಸಗಿ ಸಂಸ್ಥೆಗಳನ್ನು ಸರಕಾರ ವಹಿಸಿಕೊಂಡು ಶಿಕ್ಷಣ ಸಮಸ್ಯೆಗಳನ್ನು ಹೋಗಲಾಡಿಸಿ ಬಡವರ ಮಕ್ಕಳಿಗೆ ಶಿಕ್ಷಣ ಸಿಗುವಂತಾಗಲಿ ಎಂದು ಎಸ್. ಎಫ್ ಐ ಒತ್ತಾಯಿಸುತ್ತದೆ.

ಕರ್ನಾಟಕ ರಾಜ್ಯ ಖಾಸಗಿ ಮಾಧ್ಯಮಿಕ ನೌಕರರ ಹೋರಾಟಕ್ಕೆ ಎಸ್ ಎಫ್ ಐ ಜಿಲ್ಲಾ ಘಟಕ ತನ್ನ ಸಂಪೂರ್ಣ ಬೆಂಬಲ ನೀಡಿದೆ ಎಂದು ಧಾರವಾಡ ಜಿಲ್ಲಾ ಎಸ್ ಎಫ್.ಐ.ನ ಸಂಘಟಕರಾದ ಕಾಂ| ಪ್ರಕಾಶ್ ಎಸ್. ಮಡಿಕೇರಿ ತಿಳಿಸಿದ್ದಾರೆ.

●

ಕುಂದಾಪುರ

ಸ್ಟೋನ್ ಕ್ರಶರ್‌ಗೆ ತಡೆ: ಎಸ್. ಎಫ್. ಐ. ವಿಜಯ

ಕೋಟಾದ ಗಿಳಿಯಾರು ಪ್ರಾಥಮಿಕ ಶಾಲೆಯ ಬಳಿ ಒಂದು ಸ್ಟೋನ್‌ಕ್ರಶರ್ (ಜಲ್ಲಿ ಪುಡಿಮಾಡುವ ಯಂತ್ರ) ಸ್ಥಾಪಿಸುವ ಯೋಜನೆಯನ್ನು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್ ಎಫ್. ಐ) ಕುಂದಾಪುರ ಘಟಕವು ಗಮನಿಸಿ; ಒಂದು ವೇಳೆ ಈ ಯಂತ್ರ ಸ್ಥಾಪಿತವಾದಲ್ಲಿ ಅದರಿಂದ ಹೊರಡುವ ಶಬ್ದ ಮತ್ತು ಧೂಳಿನ ಕಣದಿಂದ ಎಳೆ ವಿದ್ಯಾರ್ಥಿಗಳು, ಹತ್ತಿರವಿರುವ ಜೂನಿಯರ್ ಕಾಲೇಜ್ ವಿದ್ಯಾರ್ಥಿಗಳು ಮತ್ತು ಪರಿಸರದಲ್ಲಿರುವ ನಿವಾಸಿಗಳು ಹಾಗು ಪ್ರಯಾಣಿಕರ ಮೇಲೆ ಆಗಲಿರುವ ಅನಾರೋಗ್ಯಕರ ಪರಿಣಾಮದ ವಿಚಾರಗಳನ್ನು ವಿಮರ್ಶಿಸಿ, ಯೋಜಿತ ಪ್ರದೇಶದಲ್ಲಿ ಯಂತ್ರ ಸ್ಥಾಪನೆಗೆ ಅನುಮತಿ ನೀಡಬಾರದೆಂದು ಸಂಬಂಧಪಟ್ಟ ಆರೋಗ್ಯ ಇಲಾಖೆಗೆ ಮನವಿಯನ್ನು ಅರ್ಪಿಸಿತ್ತು. ಸಂಬಂಧಿತ ಇಲಾಖೆಯು ಸೂಕ್ತ ಕ್ರಮದಿಂದಾಗಿ ಯೋಜಿತ ಸ್ಥಳದಲ್ಲಿ ಯಂತ್ರ ಸ್ಥಾಪನೆಯ ಕಾರ್ಯ ರದ್ದಾಗಿದ್ದು, ಸಾರ್ವಜನಿಕರಿಗೆ ಸಂಭವಿಸಲಿರುವ ಅನಾಹುತವನ್ನು ಎಸ್. ಎಫ್. ಐ. ಯ ಸಕಾಲಿಕ ಪ್ರಯತ್ನದಿಂದ ತಪ್ಪಿಸಿದಂತಾಗಿದೆ.

●

ಬೆಂಗಳೂರು

ಡಿ. ಬಿ. ಎ. ವಿದ್ಯಾರ್ಥಿಗಳ ಹೋರಾಟ

ತಾಂತ್ರಿಕ ಶಿಕ್ಷಣ ಮಂಡಳಿಯು ನಡೆಸುತ್ತಿರುವ ಡಿ. ಬಿ. ಎ. ಕೋರ್ಸಿನ ವಿದ್ಯಾರ್ಥಿಗಳು ತಮ್ಮ ಬೇಡಿಕೆಗೆ ಒತ್ತಾಯಿಸಿ ಎಸ್. ಎಫ್. ಐ. ಬೆಂಗಳೂರು ನಗರ ಸಮಿತಿಯ ನೇತೃತ್ವದಲ್ಲಿ ದಿನಾಂಕ 24-1-83ರಂದು ತರಗತಿಗಳನ್ನು ಬಹಿಷ್ಕರಿಸಿ ನಂತರ ತಾಂತ್ರಿಕ ಇಲಾಖೆ, ನಿರ್ದೇಶಕರಿಗೆ, ಮುಖ್ಯಮಂತ್ರಿಗಳಿಗೆ ಮತ್ತು ವಿದ್ಯಾಮಂತ್ರಿಗಳಿಗೆ ಮನವಿ ಅರ್ಪಿಸಲಾಯಿತು. ವಿದ್ಯಾಮಂತ್ರಿಗಳು ನೀಡಿದ ಭರವಸೆಯ ಮೇರೆಗೆ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಗಿದೆ. ತಾಂತ್ರಿಕ ಇಲಾಖೆಯೇ ನಡೆಸುತ್ತಿರುವ ಡಿ ಬಿ ಎ ಕೋರ್ಸಿಗೆ ಮಾನ್ಯತೆ ಸಿಕ್ಕದಿರುವುದು ತುಂಬಾ ಆಶ್ಚರ್ಯಕರವಾಗಿದೆಯಲ್ಲದೆ, ವಿದ್ಯಾರ್ಥಿಗಳ ಭವಿಷ್ಯದೊಡನೆ ಇಲಾಖೆ ಚೆಲ್ಲಾಟವಾಡುತ್ತಿರುವುದರಿಂದ ವಿದ್ಯಾರ್ಥಿಗಳು ತೊಂದರೆಗೀಡಾಗಿರುವುದರಿಂದ ಎಸ್.ಎಫ್.ಐ., ಬೆಂಗಳೂರು ನಗರ ಸಮಿತಿಯು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುತ್ತದೆ.

●

ಹೊಸಪೇಟೆ

ಶಾಲಾ ನೌಕರರಿಗೆ ಎಸ್. ಎಫ್. ಐ. ಬೆಂಬಲ

ದಿನಾಂಕ 5-2-83ರಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ ಎಫ್ ಐ) ನೇತೃತ್ವದಲ್ಲಿ ನಡೆದ ವಿದ್ಯಾರ್ಥಿಗಳ ಬೃಹತ್ ಮೆರವಣಿಗೆಯು, ರಾಜ್ಯಾದ್ಯಂತ ಸರದಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಕರ್ನಾಟಕ ರಾಜ್ಯ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ಬೆಂಬಲಕ್ಕಾಗಿ ಹಾಗೂ ಅವರ ಬೇಡಿಕೆಗಳ ಈಡೇರಿಕೆಗೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿ, ಇಂದು ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ನಗರದ ಶಾಲಾ–ಕಾಲೇಜುಗಳಿಂದ ಸುಮಾರು 1,500ಕ್ಕು ಮಿಕ್ಕ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಎಸ್.ಎಫ್.ಐ. ನಾಗರೀಕರ, ಶಿಕ್ಷಕರ, ವಿಶೇಷವಾಗಿ ವಿದ್ಯಾರ್ಥಿಗಳ ಪ್ರಶಂಸೆಗೆ ಪಾತ್ರವಾಯಿತು ಎಂಬುದಾಗಿ ಪ್ರಕಟನೆ ತಿಳಿಸಿದೆ.

ತಾಲ್ಲೂಕು ಕಛೇರಿ ಆವರಣದಲ್ಲಿ ನಡೆದ ಸಭೆಯಲ್ಲಿ ಕಾ| ಗುರುಶಾಂತ ಅವರು ಬೇಡಿಕೆ ಮತ್ತು ಬೆಂಬಲದ ಬಗ್ಗೆ ವಿವರಿಸಿ ಮಾತನಾಡಿದರು.

○

ಕೋಣಿಯಲ್ಲಿ ಕಾಂಗ್ರೆ ಗೂಂಡಾಗಿರಿ-ಪ್ರತಿಭಟನೆ

ಕುಂದಾಪುರದ ಸಮೀಪದ ಕೋಣಿ ಗ್ರಾಮದ ಕಬ್ಬಿರೆಯಲ್ಲಿ ದಿನಾಂಕ 31-1-83ರಂದು ರಾತ್ರಿ ಚುನಾವಣಾ ದ್ವೇಷದ ಕಾರಣದಿಂದ ಕಾಂಗ್ರೆ ಗೂಂಡಾಗಳು ಅಮಾನುಷವಾಗಿ ಹಲ್ಲೆ ನಡೆಸಿ ಮೂವರನ್ನು ಜಖಂಗೊಳಿಸಿದ್ದಾರೆ; ತಲವಾರು ಕತ್ತಿ ದೊಣ್ಣೆಯಂತಹ ಮಾರಕ ಆಯುಧ ಹಿಡಿದು ದಾಂಗಡ್ಡ ಕಟ್ಟಿ, ಶ್ರೀ ರಾಮಣ್ಣ ಶೆಟ್ಟಿ, ಸೀತಾರಾಮ ಶೆಟ್ಟಿ, ಕೃಷ್ಣ ಶೆಟ್ಟಿ ಮತ್ತು ಕೃಷ್ಣ ಹರಿಜನ ಎಂಬುವರನ್ನು ಚೆನ್ನಾಗಿ ಥಳಿಸಿದ್ದಾರೆ. ಗಾಯಾಳುಗಳು ಸ್ಥಳೀಯ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮಾರ್ಕ್ಸವಾದಿ ಕಮ್ಯೂನಿಸ್ಟ್ ಪಕ್ಷದ ಕೋಣಿ ಘಟಕವು ಇಂತಹ ಅಮಾನುಷ ಹೇಯ ಕೃತ್ಯವೆಸಗಿದ ಕಾಂಗ್ರೆ ಗೂಂಡಾಗಳ ಗೂಂಡಾಗಿರಿಯನ್ನು ಖಂಡಿಸುತ್ತದೆ. ಈ ಬಗ್ಗೆ ನ್ಯಾಯವಾದ ತನಿಖೆ ಮಾಡಲು ಸರಕಾರವನ್ನು ಆಗ್ರಹಪಡಿಸುತ್ತದೆ ಎಂಬುದಾಗಿ ಕಾರ್ಯದರ್ಶಿ ಕಾ| ಕೆ. ವೆಂಕಟೇಶ ನಾಯಕ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

○

ಕುಡೂರು ಆಯೋಗದ ವರದಿ — ಸರ್ಕಸ್ ದುರಂತ

(3ನೇ ಪುಟದಿಂದ)

ಕಾರ ಪೋಲೀಸ್ ಕಮಿಶನರಿಗೆ ಇದೆ. ಆದರೆ ಅವರು ಈ ಹೊಣೆ ನಿರ್ವಹಿಸುವಾಗ ಸಾಕಷ್ಟು ಮುನ್ನೆಚ್ಚರಿಕೆ ತೋರಲಿಲ್ಲ.

"ಪೋಲೀಸ್ ಅಧಿಕಾರಿಗಳಿಗೆ ಸರ್ಕಸ್ ನಡೆದ ನಿವೇಶನದ ಲಕ್ಷಣ ಗೊತ್ತಿತ್ತು, ಆದರೂ ಲೈಸೆನ್ಸ್ ಕೊಡಲು ಶಿಫಾರಸು ಮಾಡಿದರು. ಅವರೆಲ್ಲರೂ ಸರ್ಕಸ್ ಮ್ಯಾನೇಜರ್ ಅವರು ನಿವೇಶನದ ಬಗ್ಗೆ ನೀಡಿದರೆಂದು ಹೇಳಲಾದ ಭರವಸೆ ಬಿಟ್ಟು ಪೋಲೀಸ್ ಅಧಿಕಾರಿಗಳ ಮುಂದೆ ಬೇರೆಯಾವದೇ ದಾಖಲೆ ಇರಲಿಲ್ಲ. ವಿವೇಕ ಮತ್ತು ಮುನ್ನೆಚ್ಚರಿಕೆ ಕಮಿಶನರ್ ಅವರನ್ನು ಸ್ಥಳ ಪರೀಕ್ಷಿಸುವಂತೆ ಮಾಡಬೇಕಾಗಿತ್ತೆಂದು ಆಯೋಗ ಅಭಿಪ್ರಾಯ ವ್ಯಕ್ತಮಾಡಿದೆ. ಪೋಲೀಸ್ ಡೆಪ್ಯೂಟಿ ಕಮಿಶನರ್ ಅವರು ಲೈಸೆನ್ಸಿಗೆ ಶಿಫಾರಸುಮಾಡಿದ ಸಮಯದಲ್ಲಿ ನಿವೇಶನ ಇದ್ದ ರೀತಿ ಹೀಗಿದೆ:—ಜಮೀನನ್ನು ಹುಡಿಮಣ್ಣಿನಿಂದ ತುಂಬಲಾಗಿತ್ತು. ಪಶ್ಚಿಮ ಮತ್ತು ಪೂರ್ವದಲ್ಲಿ ತೆರೆದ ಚರಂಡಿ ಇತ್ತು. ಇದರಲ್ಲಿ ಚರಂಡಿ ಮತ್ತು ಮಳೆಯ ನೀರು ಒಂದೇಸಮನೆ ಹರಿಯುತ್ತಿತ್ತು. ಉತ್ತರದಲ್ಲಿ ತಗ್ಗಿನ ಪ್ರದೇಶವಿತ್ತು. ದಕ್ಷಿಣದಲ್ಲಿ ರಾಜಾಜಿನಗರ ರಸ್ತೆ ಇದ್ದು ಆ ರಸ್ತೆಯಲ್ಲಿ ಭಾರಿ ಸಂಚಾರವಿತ್ತು. ಯಶವಂತಗೌಳ ಅವರೇ ಹೇಳಿದ ಮಾತಿದು ಇಂಥ ಪರಿಸ್ಥಿತಿಯಲ್ಲಿ ಸ್ಥಳವನ್ನು ಸ್ವತಃ ಪರೀಕ್ಷಿಸಿ ನೋಡಲಿಲ್ಲ ನಿವೇಶನ ಸರ್ಕಸ್ಸಿಗೆ ಸೂಕ್ತವಾಗಿತ್ತೆ ಎನ್ನುವ ತೀರ್ಮಾನಕ್ಕೆ ಬರಲು ಮುಖ್ಯವರಿಕೆಯಾಗುವಂಥದಾಖಲೆ ಕಮಿಶನರ್ ಅವರ ಮುಂದಿರಲಿಲ್ಲ. ಆದರೂ 4–12–80 ರಂದು ಪೋಲೀಸ್‌ಕಮೀಶನರ್ ಗುರಡಾಚಾರ್ ಅವರು ಕೆಲವು ಕರಾರುಗಳೊಂದಿಗೆ ಲೈಸೆನ್ಸ್ ನೀಡಿದರು. ಲೋಕೋಪಯೋಗಿ ಇಲಾಖೆಯು ಸರ್ಟಿಫಿಕೇಟ್ ಮತ್ತು ವಿದ್ಯುಚ್ಛಕ್ತಿ ಸುರಕ್ಷತಾ ಸರ್ಟಿಫಿಕೇಟ್‌ಗಳನ್ನು ಸರ್ಕಸ್ ಪ್ರದರ್ಶನ ಆರಂಭಿಸುವ ಮುನ್ನ ಮಂಡಿಸಬೇಕೆಂಬ ಶರತ್ತಿನೊಡನೆ ಲೈಸೆನ್ಸ್ ನೀಡಲಾಯಿತು. ಪ್ರದರ್ಶನ ಆರಂಭವಾಗುವ ಮುನ್ನ ಲೈಸೆನ್ಸ್ ಶರತ್ತುಗಳನ್ನು ಸರ್ಕಸ್ ಆಡಳಿತವರ್ಗ ಪೂರೈಸಿರಲಿಲ್ಲ. ಲೈಸೆನ್ಸ್ ಶರತ್ತಿಗನುಗುಣವಾಗಿ ಲೈಸೆನ್ಸ್‌ದಾರ ನಡೆದುಕೊಳ್ಳುವಂತೆ ಮಾಡುವುದು ಲೈಸೆನ್ಸ್‌ಕೊಡುವ ಪೋಲೀಸ್ ಅಧಿಕಾರಿಗಳ ಕರ್ತವ್ಯ. ಲೈಸೆನ್ಸ್ ಕೊಟ್ಟ ಮಾತ್ರಕ್ಕೆ ಜವಾಬ್ದಾರಿ ಮುಗಿಯುವುದಿಲ್ಲೆಂದು ಆಯೋಗ ಹೇಳಿದೆ.

ಕೆ. ಇ. ಬಿ ಯವರ ಬೇಜವಾಬ್ದಾರಿ ಕೆಲಸ

ಜಕ್ಕರಾಯನ ಕೆರೆಯ ಮೈದಾನ ಸರ್ಕಸ್ಸಿಗೆ ಸೂಕ್ತವಲ್ಲೆಂದು ತಿಳಿದೂ ವಿದ್ಯುಚ್ಛಕ್ತಿ ಮಂಡಳಿಯ ಅಧಿಕಾರಿಗಳು ತಾತ್ಕಾಲಿಕ ವಿದ್ಯುಚ್ಛಕ್ತಿ ಸರಬರಾಜನ್ನು ಮಂಜೂರು ಮಾಡಿರುವುದು ಮೆಚ್ಚುವಂಥದ್ದಾಗಿ ಕಂಡುಬರುವುದಿಲ್ಲೆಂದು ಆಯೋಗ ಅಭಿಪ್ರಾಯಪಟ್ಟಿದೆ.

ರೇಲ್ವೆ ಇಂಜಿನಿನ ಕಿಡಿಯಿಂದಾಗಲೀ, ಅಡಿಗೆ ಮನೆಗಳಲ್ಲಿಯ ಬೆಂಕಿಯಿಂದಾಗಲೀ ಹಾಗೆಯೇ ಹೈಟೆನ್‌ಶನ್ ತಂತಿಯಿಂದ ಹಾರಿರಬಹುದಾದ ಕಿಡಿಯಿಂದಾಗಲೀ ಅನಾಹುತ ಸಂಭವಿಸಿರಬಹುದೆಂಬುದನ್ನ ಆಯೋಗ ತಳ್ಳಿಹಾಕಿದೆ.

ಎಲ್ಲ ಸಾಕ್ಷಿಗಳನ್ನೂ ಪರಿಶೀಲಿಸಿ ಷಾರ್ಟ್ ಸರ್ಕಿಟನಿಂದ ಬೆಂಕಿ ಅನಾಹುತ ಸಂಭವಿಸಿತೆನ್ನುವ ತೀರ್ಮಾನಕ್ಕೆ ಆಯೋಗ ಬಂದಿದೆ.

500 ಪುಟಗಳ ವರದಿಯ ಕೊನೆಯಲ್ಲಿ ಆಯೋಗವು ಒಬ್ಬಿಬ್ಬರನ್ನು ಬಿಟ್ಟರೆ ಇತರ ಎಲ್ಲ ಅಧಿಕಾರಿಗಳು ತಮ್ಮ ಕರ್ತವ್ಯ ಪಾಲನೆಯಲ್ಲಿ ವಿಫಲರಾಗಿದ್ದಾರೆಂದೂ, ಸಾರ್ವಜನಿಕರ ಸುರಕ್ಷತೆಯನ್ನು ನಿರ್ಲಕ್ಷಿಸಿದ್ದರೆಂದೂ, ಮೇಲಿನವರ ಕಾಣದ ಕೈಗೆ ಅಥವಾ ಬರೆಯುವ ಸೂಚನೆಗಳಿಗೆ ಮಣಿದು ಸರ್ಕಸ್ ಆಡಳಿತ ವರ್ಗಕ್ಕೆ ಅನುಕೂಲ ಮಾಡಿಕೊಟ್ಟರೆಂದೂ, ಲೈಸೆನ್ಸ್ ಕೊಡಲು ಮಾರ್ಗಬಿಟ್ಟು ಹೋಗಲಾಗಿದೆಯೆಂದೂ, ನಿಯಮಗಳನ್ನು ಗಾಳಿಗೆ ತೂರಲಾಗಿದೆಂದೂ ಆಯೋಗದ ಮುಂದೆ ವಾದಿಸಿದ್ದನ್ನು ತಿರಸ್ಕರಿಸುವುದು ಕಷ್ಟವೆಂದು ಆಯೋಗ ಹೇಳಿದೆ.

ಹಾಗೆಯೇ "ಸರಕಾರ ಅವಲಂಬಿಸಬೇಕಾದ ಉನ್ನತ ಅಧಿಕಾರಿಗಳು ಸರ್ಕಸ್ ಕಂಪೆನಿಯೊಂದರ ಆಡಳಿತ ವರ್ಗದ ಮುಂದೆ ಕುಸಿದರೆ ಎಲ್ಲ ನಿಯಮಗಳನ್ನೂ ಉಲ್ಲಂಘಿಸಿ ಬೆಂಗಳೂರಿನಂತ ನಗರದಲ್ಲಿ ಸರ್ಕಸ್ ನಡೆಸಲು ಅವಕಾಶ ಮಾಡಿಕೊಟ್ಟರೆ ಅಂಥವರ ಕೈಯ್ಯಲ್ಲಿ ರಾಜ್ಯ ಅನಾಥವಾಗುತ್ತದೆ. ಜೀವ ಮತ್ತು ಆಸ್ತಿ ರಕ್ಷಣೆಗಾಗಿ ಪ್ರಭುತ್ವವನ್ನು ಅವಲಂಬಿಸಿರುವ ಜನ ದಿಕ್ಕಿಲ್ಲದವರಾಗುತ್ತಾರೆ" ಎಂದು ಆಯೋಗ ವಿಷಾದಿಸಿದೆ.

ಬಂಡವಾಳಶಾಹಿ ಭ್ರಷ್ಟ ಸಮಾಜದಲ್ಲಿ ಇಂಥ ಘಟನೆಗಳು ನಡೆಯುತ್ತ ಬಂದಿವೆ. ಬಂಡವಳಶಾಹಿ ಪದ್ಧತಿಯನ್ನು ಕಿತ್ತು ಹಾಕಿ, ಹೊಸ ಸಮಾಜ ರಚಿಸಲು ನಾವೆಲ್ಲ ದುಡಿಯಬೇಕಾದ್ದು ಅತ್ಯಗತ್ಯ.

●

ರಾಯಚೂರು

ನಿರುದ್ಯೋಗಿ ಯುವಕರ ಹೋರಾಟ

ರಾಯಚೂರಿನಲ್ಲಿ ಸುಮಾರು 600 ಕೋಟಿ ವೆಚ್ಚದಲ್ಲಿ ತಯಾರಾಗುತ್ತಿರುವ ಶಾಖೋತ್ಪನ್ನ ಕೇಂದ್ರದಲ್ಲಿ ಸುಮಾರು 4000 ನಿರುದ್ಯೋಗಿಗಳಿಗೆ ಕೆಲಸದ ಅವಕಾಶವಿದೆ ಎಂದು ತಿಳಿದು ಇಲ್ಲಿಯ ನಿರುದ್ಯೋಗಿಗಳು ತುಂಬಾ ಆಶಾಭಾವನೆಯನ್ನು ಹೊಂದಿದ್ದರು. ಆದರೆ 30 ವರ್ಷಗಳಿಂದಲೂ ಕಾಂಗ್ರೆ ಗರಡಿಯಲ್ಲಿ ತರಪೇತಾದ ಉದ್ಯೋಗ ವಿನಿಮಯ ಕೇಂದ್ರ ಮತ್ತು ಶಾಖೋತ್ಪನ್ನ ಕೇಂದ್ರದ ಆಡಳಿತ ವರ್ಗದವರು ತಮ್ಮ ಬ್ರಿಟಿಷ್ ವರ್ತನೆಯಿಂದ ಜಿಲ್ಲೆಯ ನಿರುದ್ಯೋಗಿಗಳಿಗೆ ಮೋಸಮಾಡುತ್ತಿದ್ದಾರೆ.

ಇಡೀ ಜಿಲ್ಲೆಯಲ್ಲಿ ಸುಮಾರು 15 ಸಾವಿರ ನಿರುದ್ಯೋಗಿಗಳು ವಿವಿಧ ತಾಂತ್ರಿಕ, ಡಿಪ್ಲೊಮಾ, ಪದವಿ, ಎಸ್. ಎಸ್. ಎಲ್. ಸಿ. ಮುಂತಾದ ಪ್ರಮಾಣ ಪತ್ರಗಳನ್ನು ಪಡೆದು ಉದ್ಯೋಗಕ್ಕಾಗಿ ವಿನಿಮಯ ಕೇಂದ್ರದಲ್ಲಿ ಹೆಸರು ನೊಂದಾಯಿಸಿ, ಎಂಟತ್ತು ವರ್ಷಗಳಿಂದ ಕಾಯುತ್ತಿದ್ದಾರೆ.

ಆದರೆ ಉದ್ಯೋಗ ವಿನಿಮಯ ಕೇಂದ್ರ ಮತ್ತು ಶಾಖೋತ್ಪನ್ನ ಕೇಂದ್ರ (ಕೆ. ಪಿ. ಸಿ.)ದ ಅಧಿಕಾರಿಗಳ ಒಳಸಂಧಾನದ ಫಲವಾಗಿ ತಮ್ಮ ತಮ್ಮ ಸಂಬಂಧಿಕರಿಗೆ ಮತ್ತು ಒಂದು ಸೀಟಿಗೆ ಸಾವಿರ ಗಟ್ಟಲೆ ಲಂಚ ಕೊಡಲು ತಯಾರಿದ್ದವರಿಗೆ ಗೌಪ್ಯ ರೀತಿಯಲ್ಲಿ ಸಂದರ್ಶನಕ್ಕೆ ಕರೆದು ನೇಮಕಾತಿ ಮಾಡಿಕೊಂಡು ಸುಮಾರು ಈಗಾಗಲೇ 250 ಜನರನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ. ಇಷ್ಟೇ ಅಲ್ಲದೆ ಕರ್ನಾಟಕ ಪವರ್ ಕಾರ್ಪರೇಷನ್ ರಾಜ್ಯದ ಇತರ ಘಟಕಗಳಾದ ತಟ್ಟಿಹಳ್ಳಿ, ಸೂಪ, ಕಾಳಿ ಯೋಜನೆ, ಜೋಗ್ ಮುಂತಾದ ಘಟಕಗಳಿಂದ ಹೆಚ್ಚಾದ ಕೆಲಸಗಾರರನ್ನು ಸುಮಾರು 2500 ಜನರನ್ನು ಕೆ ಪಿ ಸಿ. ಆಡಳಿತ ನಿಯಮಗಳಿಗೆ ವಿರುದ್ಧವಾಗಿ ರಾಯಚೂರು ಘಟಕಕ್ಕೆ ವರ್ಗಾಯಿಸಲು, ಆಡಳಿತವರ್ಗ ಸಂಚು ಮಾಡುತ್ತಿದೆ. ಅದರ ಪ್ರಯೋಗಾರ್ಥವಾಗಿ ಈಗಾಗಲೇ 80 ಜನ ಕೆಲಸಗಾರರು ಇಲ್ಲಿ ಬಂದು ಕೆಲಸಕ್ಕೆ ಸೇರಿ ಕೊಂಡಿದ್ದಾರೆ. ಈ ಎಲ್ಲಾ ಅನ್ಯಾಯಗಳ ವಿರುದ್ಧ, ಕೆ ಪಿ.ಸಿ. ಘಟಕದಲ್ಲಿ ರಾಯಚೂರು ಜಿಲ್ಲೆಯ ನಿರುದ್ಯೋಗಿಗಳಿಗೆ 65% ಪ್ರಾತಿನಿಧ್ಯ ಕೊಡಬೇಕೆಂಬ ಮುಖ್ಯ ಬೇಡಿಕೆಯೊಂದಿಗೆ, ಯುವಕರ ಕಾರ್ಯಾಚರಣೆ ಪ್ರಾರಂಭವಾಯಿತು.

ದಿನಾಂಕ 22-1-83ರಂದು ನಗರದ ಯುವಕರು, ವಿದ್ಯಾರ್ಥಿಗಳು ಪಕ್ಷ, ಜಾತಿ, ಸಂಘಟನೆ ಯಾವುದೇ ಭೇದವನ್ನು ಎಣಿಸದೆ ಎಲ್ಲರೂ ಒಟ್ಟಿಗೇ ಸೇರಿ ಕೆ. ಪಿ. ಸಿ.ಯಲ್ಲಿ ನಡೆಯುತ್ತಿರುವ ಅಕ್ರಮ ಸಂದರ್ಶನಗಳನ್ನು ತಡೆದು ಜಿಲ್ಲೆಯ ನಿರುದ್ಯೋಗಿಗಳಿಗೆ ಪ್ರಾತಿನಿಧ್ಯ ಕೊಡಬೇಕೆಂಬ ಮನವಿಯನ್ನು ಅರ್ಪಿಸಲು ನಗರದಿಂದ 18 ಕಿ ಮಿ. ದೂರದಲ್ಲಿರುವ ಪ್ರಾಜೆಕ್ಟಿಗೆ ದಾವಿಸಿದರು. ಎಸ್. ಎಫ್. ಐ., ಡಿ ವೈ.ಎಫ್.ಐ. ಯುವ ಜನತೆ, ಯುವ ಮೋರ್ಚಾ, ಸಿ. ಐ. ಟಿ. ಯು. ಮುಂತಾದ ಸಂಘಟನೆಗಳನ್ನು ಪ್ರತಿನಿಧಿಸಿದ ಯುವಕರು ಮೆರವಣಿಗೆಯಲ್ಲಿ ಭಾಗವಹಿಸಿದರು.

ಅಂದು ನಡೆದ ಮಾತುಕತೆಯಲ್ಲಿ ಕೆ. ಪಿ ಸಿ. ಆಡಳಿತ ವರ್ಗದವರು ಯಾವುದಕ್ಕೂ ಒಪ್ಪದೆ, ಎಲ್ಲವೂ ಕಾನೂನು ಪ್ರಕಾರ ನಡೆಯುತ್ತಿದೆ ಎಂದು ವಾದಿಸಿದರು. ನಿರುದ್ಯೋಗಿ ಯುವಕರ ಮಾತಿಗೆ ಕಿವಿಗೊಡದ ಆಡಳಿತವರ್ಗ ಪುನಃ 24ನೇ ತಾರೀಕಿನಂದು ತಾಂತ್ರಿಕ ಕೆಲಸಗಾರರಿಗಾಗಿ ಸಂದರ್ಶನ ಕರೆದಿದ್ದರು. ರಾಯಚೂರು ಜಿಲ್ಲೆಯಲ್ಲಿಯೇ ಬೇಕಾದಷ್ಟು ಸೂಕ್ತ ಅಭ್ಯರ್ಥಿಗಳಿದ್ದರೂ ಶೇಕಡ 70ರಷ್ಟು ಅಭ್ಯರ್ಥಿಗಳನ್ನು ಬೇರೆ ಬೇರೆ ಜಿಲ್ಲೆಗಳಿಂದ ಕರೆಸಿದ್ದರು. ಅಷ್ಟೇ ಅಲ್ಲದೆ ರಾಯಚೂರಿನ ಅಭ್ಯರ್ಥಿಗಳಿಗೂ ಉದ್ಯೋಗ ವಿನಿಮಯ ಕೇಂದ್ರದ ನೊಂದಣಿ ಸಿನಿಯಾರಿಟಿ ಪ್ರಕಾರ ಸಂದರ್ಶನ ಕಾರ್ಡು ಕಳುಹಿಸದೇ ಮೆರಿಟ್ ಪ್ರಕಾರ ಕಳುಹಿಸಿ ಅನೇಕರಿಗೆ ಮೋಸ ಮಾಡಿದರು. ಈ ಅಕ್ರಮ ಸಂದರ್ಶನವನ್ನು ತಡೆಯಲು ಸಮಾರು ಐನೂರು ಯುವಕರು ಮೆರವಣಿಗೆಯಲ್ಲಿ ಪಾಲ್ಗೊಂಡು ಸಂದರ್ಶನವನ್ನು ರದ್ದು ಪಡಿಸಿದರು. ಆಕಸ್ಮಾತ್ತಾಗಿ ಕೆ. ಪಿ ಸಿ. ಮ್ಯಾನೆಜಿಂಗ್ ಡೈರೆಕ್ಟರ್ ಕೆ.ಸಿ ರೆಡ್ಡಿಯವರು ಬಂದಿರುವ ಸುದ್ಧಿ ತಿಳಿದು ಅವರನ್ನು ಭೇಟಿಯಾಗಿ ಮನವಿ ಅರ್ಪಿಸಲು ಪಟ್ಟು ಹಿಡಿದರು ಆಡಳಿತ ವರ್ಗದ ಅವರು ಬಂದೇ ಇಲ್ಲವೆಂಬ ಹಾರಿಕೆಯ ಉತ್ತರಕ್ಕೆ ಮಣಿಯದೆ, ಯುವಕರು ಪ್ರಾಜೆಕ್ಟಿನ ಎರಡು ಮುಖ್ಯ ದ್ವಾರಗಳನ್ನು ಮುಚ್ಚಿ ಅದರ ಮುಂದೆ ಧರಣಿ ಕುಳಿತರು. ಊಟದ ಸಮಯವಾದ್ದರಿಂದ ನೂರಾರು ವಾಹನಗಳು, ಕೆಲಸಗಾರರು ಒಳಗೆ ಇರುವಂತಾಯಿತು. ಪೋಲಿಸರೊಂದಿಗೆ ಕೈ ಕೈ ಮಿಲಾಯಿಸಿ ವಾದಕ್ಕಿಳಿದ ಯುವಕರನ್ನು ಸಮಜಾಯಿಸಲು ಆಗದೆ ಪೋಲಿಸ್ ಅಧಿಕಾರಿಗಳು ಅಸಾಹಯಕರಾದರು. ಮೂರು ತಾಸುಗಳ ನಂತರ ಎಂ ಡಿ. ಯುವಕರೊಂದಿಗೆ ಮಾತುಕತೆಗೆ ಒಪ್ಪಿದರು. ದೀರ್ಘವಾಗಿ ಸಮಸ್ಯೆಗಳಿಗೆ ಉತ್ತರಿಸಲು, ಚರ್ಚಿಸಲು ಸಮಯವಿಲ್ಲವೆಂದು ಫೆಬ್ರವರಿಯಲ್ಲಿ ನಾನೆ ಇಲ್ಲಿಗೆ ಬಂದು ಮಾತನಾಡುತ್ತೇನೆಂದು ಅಲ್ಲಿಯವರೆಗೂ ಯಾವುದೇ ರೀತಿಯ ಸಂದರ್ಶನಗಳನ್ನು ನಡೆಸುವುದಿಲ್ಲವೆಂದು ಭರವಸೆ ಇತ್ತರು.

ಅಂದು ಸಂಜೆ ರಾಯಚೂರಿನಲ್ಲಿ ನಿರುದ್ಯೋಗಿ ಯುವಕರು ಸಭೆ ಸೇರಿ "ಜಿಲ್ಲಾ ನಿರುದ್ಯೋಗಿ ಯುವಜನ ಹೋರಾಟ ಸಮಿತಿ"ಯನ್ನು ರಚಿಸಿ ಈ ಕೆಳಗಿನ ಪದಾಧಿಕಾರಿಗಳನ್ನು ಚುನಾಯಿಸಿತು.

ಕೃಷ್ಣಾರೆಡ್ಡಿ ಅಧ್ಯಕ್ಷರು (ಯುವ ಜನತಾ) ರಾಘವೇಂದ್ರ ಕುಷ್ಟಗಿ ಪ್ರಧಾನ ಕಾರ್ಯದರ್ಶಿ (ಡಿ ವೈ ಎಫ್. ಐ) ಮತ್ತು 10 ಜನರ ಕಾರ್ಯಕಾರಿ ಸಮಿತಿಯನ್ನು ರಚಿಸಿ 26-1-83 ರಿಂದ ಏಳು ಬೇಡಿಕೆಗಳೊಂದಿಗೆ ಸರದಿ ಉಪವಾಸ ಪ್ರಾರಂಭಿಸಿದ್ದಾರೆ. ನಗರದಲ್ಲಿ ದಿನಾಲು ಸಂಜೆ ಬೇರೆ ಬೇರೆ ಕ್ಷೇತ್ರಕ್ಕೆ ಸೇರಿದ ಬುದ್ಧಿಜೀವಿಗಳು, ಕಾರ್ಮಿಕ ನಾಯಕರು, ಮಹಿಳೆಯರು, ಮುಂತಾದವರು ಸಾರ್ವಜನಿಕ ಭಾಷಣಗಳಲ್ಲಿ ಭಾಗವಹಿಸಿ ನಿರುದ್ಯೋಗಿಗಳಿಗೆ ಬೆಂಬಲ ಸೂಚಿಸುತ್ತಿದ್ದಾರೆ. 31-1-83 ರಂದು ಸಂಜೆ ಜಿಲ್ಲಾ ಶಾಸಕರಾದ ಡಾ|| ಸಂಗಮೇಶ್ವರ ಸರ್ದಾರ ಮತ್ತು ಸಿ.ಐ.ಟಿ.ಯು. ಕಾರ್ಮಿಕ ನಾಯಕ ಕಾಂ. ಪುರುಷೋತ್ತಮ ಇವರು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿ ಜನತೆಗೆ ಯುವಜನರ ಸಮಸ್ಯೆಗಳನ್ನು ವಿವರಿಸಿ, ಅವುಗಳ ಪರಿಹಾರಕ್ಕಾಗಿ ಜನತೆ ಅವರಿಗೆ ಸಹಕಾರ ನೀಡಬೇಕಾಗಿ ಕೋರಿದರು. ಶಾಸಕರು ಇವರ ಸಮಸ್ಯೆಯ ಪರಿಹಾರಕ್ಕಾಗಿ ಸಾಧ್ಯವಾದಷ್ಟು ಸರಕಾರವನ್ನು ಒತ್ತಾಯಿಸುವುದಾಗಿ ಆಶ್ವಾಸನೆ ನೀಡಿದರು. ಅಂದು ಸಂಜೆ ಸಮುದಾಯ ತಂಡದವರು "ಕತ್ತಲೆರಾಜ್ಯ" ಬೀದಿ ನಾಟಕವನ್ನು ಆಡುವುದರ ಮೂಲಕ ನಿರುದ್ಯೋಗಿಗಳ ಹೋರಾಟಕ್ಕೆ ಬೆಂಬಲ ಸೂಚಿಸಿ, ಧನ ಸಹಾಯವನ್ನು ಮಾಡಿದರು.

ಸತ್ಯಾಗ್ರಹ ಮುಂದುವರೆಯುತ್ತಿದ್ದು, ಬೇಡಿಕೆಗಳು ಈಡೇರದಿದ್ದಲ್ಲಿ ಒಂದು ವಾರದಲ್ಲಿ ಬೇರೆ ಬೇರೆ ಕಾರ್ಯಕ್ರಮಗಳನ್ನು ರೂಪಿಸುವುದಾಗಿ ಹೋರಾಟ ಸಮಿತಿ ಘೋಷಿಸಿದೆ.

ಸಾವಿರಾರು ಯುವಕರು ಸ್ವಯಂ ಸ್ಫೂರ್ತಿಯಿಂದ ಹೋರಾಟದಲ್ಲಿ ಭಾಗವಹಿಸುತ್ತಿದ್ದು ಯೋಜನಾ ಬದ್ಧವಾಗಿ ಉದ್ಯೋಗವಿನಿಮಯ ಕೇಂದ್ರ ಮತ್ತು ಕೆ ಪಿ.ಸಿ. ಆಡಳಿತೆಯ ಒಂದೊಂದೇ ಭ್ರಷ್ಟತೆಯನ್ನು ಬಯಲಿಗೆಳೆಯುತ್ತಾ ವ್ಯವಸ್ಥಿತವಾಗಿ ಹೋರಾಡುತ್ತಿರುವುದು ರಾಯಚೂರಿನಲ್ಲಿ ಐತಿಹಾಸಿಕವಾದದ್ದು.

ವರದಿ : ತಾಯಣ್ಣ ಯರಗೇರಾ
ರಾಯಚೂರು

ಸರ್ಕಾರದ ತೀರ್ಮಾನಗಳಿಗೆ ಸ್ವಾಗತ

ತಾ|| 30-1-83 ರಂದು ಮಾರ್ಕ್ಸವಾದಿ ಕಮ್ಯೂನಿಸ್ಟ್ ಪಕ್ಷದ ತುಮಕೂರು ಜಿಲ್ಲಾ ಸಮಿತಿಯು ಕಾಮ್ರೇಡ್ ಟಿ. ಕೆ. ಗೋವಿಂದರಾಜುರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಕೆಳಕಂಡ ನಿರ್ಣಯಗಳನ್ನು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ.

1) ಕರ್ನಾಟಕ ಸರ್ಕಾರವು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ತರುವುದನ್ನು ಸಭೆಯು ಸ್ವಾಗತಿಸಿಸು.

2) ವಿಶ್ವಕಾರ್ಮಿಕರ ಐಕ್ಯತಾ ದಿನವಾದ 'ಮೇ' ಒಂದನ್ನು ಕರ್ನಾಟಕದಲ್ಲಿಯೂ ಸಹಾ ಸಾರ್ವತ್ರಿಕ ರಜಾ ದಿನವನ್ನಾಗಿ ಕರ್ನಾಟಕ ಸರ್ಕಾರವು ಘೋಷಿಸಿದ್ದಕ್ಕಾಗಿ ಅಭಿನಂದಿಸಲಾಗಿದೆ.

3) ರಾಷ್ಟ್ರೀಯ ಭದ್ರತಾ ಕಾಯಿದೆ ಮತ್ತು ಅಗತ್ಯ ಸೇವಾ ಮಸೂದೆ ಕಾಯಿದೆಗಳನ್ನು ರೈತರು, ಕಾರ್ಮಿಕರು ಮತ್ತು ವಿದ್ಯಾರ್ಥಿಗಳ ಮೇಲೆ ಬಳಸುವುದಿಲ್ಲವೆಂಬ ಕರ್ನಾಟಕ ಸರ್ಕಾರದ ಆಶ್ವಾಸನೆಗೆ ಹರ್ಷ ವ್ಯಕ್ತಪಡಿಸಲಾಯಿತು.

4) ರೈತರು, ಕಾರ್ಮಿಕರು ಮತ್ತು ವಿದ್ಯಾರ್ಥಿಗಳ ಮೇಲಿನ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿರುವುದು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಸಹಕಾರಿ ಸಂಘಗಳಿಗೆ ಚುನಾವಣೆ ನಡೆಸಲು ಕೈಗೊಂಡಿರುವ ಸರ್ಕಾರದ ತೀರ್ಮಾನವನ್ನು ಸ್ವಾಗತಿಸಲಾಯಿತು. ಎಂಬುದಾಗಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಕೆ. ಆರ್. ನಾಯಕರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಅಬಕಾರಿ ಇಲಾಖೆಯ ದಬ್ಬಾಳಿಕೆ ವಿರುದ್ಧ ಪ್ರತಿಭಟನೆ

ದಕ್ಷಿಣ ಕನ್ನಡ ಜಿಲ್ಲಾ ಮೂರ್ತೆದಾರರ ಸಂಘದ ಅಧ್ಯಕ್ಷರಾದ ಕಾಂ| ಪೂವಪ್ಪನವರನ್ನು ತಾರೀಖು 30ನೇ ಜನವರಿ 1983ರಂದು ಸಂಜೆ ಗಂಟೆ 7ಕ್ಕೆ ಅವರು ಸೈಕಲಿನಿಂದ ಬರುವಾಗ ಉಳ್ಳಾಲ ಅಬಕಾರಿ ಇಲಾಖೆಯ ಇನ್‌ಸ್ಪೆಕ್ಟರಾದ ಶ್ರೀ ಹರಿಶ್ಚಂದ್ರ ಉಳ್ಳಾಲ ಮತ್ತು ಅವರ ಸಿಬ್ಬಂದಿ ವಿನಾ ಕಾರಣ ಬಂಧಿಸಿ ಅವರ ಸೈಕಲನ್ನು ಪುಡಿ ಮಾಡಿ ಅವರಿಗೆ ಹೊಡೆದುದನ್ನು ಸಂಘವು ತೀವ್ರವಾಗಿ ಖಂಡಿಸುತ್ತದೆ. ಈ ರೀತಿ ದಬ್ಬಾಳಿಕೆಯನ್ನು ಮೇಲಾಧಿಕಾರಿಯವರು ಕೂಡಲೇ ತನಿಖೆ ನಡೆಸಬೇಕೆಂದು ಸಂಘವು ಒತ್ತಾಯಪಡಿಸುತ್ತದೆ. ಈ ದಬ್ಬಾಳಿಕೆಯ ವಿರುದ್ಧ ತೀವ್ರವಾದ ಪ್ರತಿಭಟನೆಯನ್ನು ಮಾಡಲು ಎಲ್ಲಾ ಸದಸ್ಯರು ಸಿದ್ಧರಾಗಬೇಕೆಂದು ಕರೆ ನೀಡುತ್ತದೆ.

(2ನೇ ಪುಟದಿಂದ)
ಶಿಕ್ಷಣ, ಆದಿವಾಸಿ ಹಾಗೂ ಹಿಂದುಳಿದ ಜನಾಂಗಗಳ ಹಿತಾಸಕ್ತಿಗಳ ರಕ್ಷಣೆ, ಬೆಲೆ ಏರಿಕೆ ತಡೆ, ಕಾರ್ಮಿಕರ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಯ ಭರವಸೆಗಳನ್ನೂ ನೀಡಿದೆ.

ಎಡ-ಪ್ರಜಾಪ್ರಭುತ್ವ ಮಿತ್ರಕೂಟ ಕೇವಲ ಅಸ್ಸಾಂಗೆ ಸೀಮಿತವಾದ ರಂಗವಲ್ಲ. ಅದು ದೇಶಾದ್ಯಂತ ಹರಡುತ್ತಿರುವ ಪ್ರಜಾಸತ್ತಾತ್ಮಕ ಚಳವಳಿಯ ಅಂಗ. ಈ ಮಿತ್ರಕೂಟ ಅಧಿಕಾರಕ್ಕೆ ಬರುವಂತಾದರೆ ಅಸ್ಸಾಂನ ಜನತೆಗೆ ದೇಶಾದ್ಯಂತ ಹಬ್ಬಿರುವ ಪ್ರಜಾಸತ್ತಾತ್ಮಕ ಚಳವಳಿಯ ಸಂಪೂರ್ಣ ಬೆಂಬಲ ದೊರೆಯಲು ಅವಕಾಶವಾಗುತ್ತದೆ.

ಸಿ. ಪಿ. ಐ. (ಎಂ) ರಾಜ್ಯ ಸೆಕ್ರೆಟೂರಿಯೇಟ್‌ನ ನಿರ್ಣಯಗಳು

ತರೀಕೆರೆ ಕ್ಷೇತ್ರದ ಉಪಚುನಾವಣೆ

ಕಾಂಗ್ರೆ ಅಭ್ಯರ್ಥಿ ಎಚ್.ಆರ್. ಬಸವರಾಜು ಅವರ ನಿಧನದಿಂದ ಜನವರಿಯಲ್ಲಿ ತರೀಕೆರೆ ಕ್ಷೇತ್ರದ ಚುನಾವಣೆಯನ್ನು ಮುಂದೂಡಲಾಗಿತ್ತು. ಈ ಕ್ಷೇತ್ರದ ಮರುಚುನಾವಣೆ ಫೆಬ್ರವರಿ 27ರಂದು ನಡೆಯಲಿದೆ. ಜನತಾ ಪಕ್ಷದ ಪರಿಯಿಂದ ಟಿ. ವಿ. ಶಿವಶಂಕರಪ್ಪನವರು ಈ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿದ್ದು, ತಾ|| 10-2-1983 ರಂದು ಸೇರಿದ ಮಾರ್ಕ್ಸವಾದಿ ಕಮ್ಯೂನಿಸ್ಟ್ ಪಾರ್ಟಿಯ ಕರ್ನಾಟಕ ರಾಜ್ಯ ಸಮಿತಿಯ ಸೆಕ್ರೆಟರಿಯೇಟ್ ಸಭೆಯು ಜನತಾ ಪಾರ್ಟಿಯ ಅಭ್ಯರ್ಥಿಗೆ ಸಂಪೂರ್ಣ ಬೆಂಬಲ ನೀಡಿದೆ. ಅಷ್ಟೇ ಅಲ್ಲದೆ ಶಿವಮೊಗ್ಗ-ಭದ್ರಾವತಿ ಹಾಗೂ ಚಿಕ್ಕಮಗಳೂರು ಪಾರ್ಟಿ ಘಟಕಗಳೂ, ಪಾರ್ಟಿ ಮುಖಂಡರೂ ಪ್ರತ್ಯಕ್ಷವಾಗಿ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳಬೇಕೆಂದೂ ನಿರ್ಣಯಿಸಿದೆ.

ವಿದ್ಯಾರ್ಥಿಗಳ ಬೇಡಿಕೆಗಳಿಗೆ ಬೆಂಬಲ

ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ರಿಯಾ ಸಮಿತಿಯವರು, ಕ್ಯಾಪಿಟೇಶನ ಫೀ ರದ್ದಾಗಬೇಕು, ವಿದ್ಯಾರ್ಥಿಗಳ ಮೇಲೆ ಹಾಕಲ್ಪಟ್ಟ ಖಟ್ಲೆಗಳನ್ನೆಲ್ಲ ರದ್ದು ಮಾಡಬೇಕು, ಬಸ್ ಸೌಕರ್ಯ, ಕ್ಯಾಂಟೀನ ವ್ಯವಸ್ಥೆ, ಹಿಂದುಳಿದ ವಿದ್ಯಾರ್ಥಿಗಳಿಗೆ ಸೌಲಭ್ಯ ಮುಂತಾದ 17 ಬೇಡಿಕೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಮಂಡಿಸಿದ್ದು ಸಿ.ಪಿ.ಐ. (ಎಂ) ರಾಜ್ಯ ಸೆಕ್ರೆಟರಿಯೇಟ್ ಈ ಬೇಡಿಕೆಗಳಿಗೆ ಸಂಪೂರ್ಣ ಬೆಂಬಲ ನೀಡಿದೆ.

ಬೆಂಗಳೂರು :

ವರ್ತೂರು ಕ್ಷೇತ್ರದ ಕಾರ್ಯಕರ್ತರ ಸಮ್ಮೇಳನ

ಜನವರಿ 26ರಂದು ಬೆಂಗಳೂರಿನ ವರ್ತೂರು ಕ್ಷೇತ್ರದ ಕಾರ್ಯಕರ್ತರ ಸಮ್ಮೇಳನ ನಡೆಯಿತು. ಬೆಳಗ್ಗೆ 10 ಘಂಟೆಗೆ ಪ್ರಾರಂಭವಾದ ಸಮ್ಮೇಳನ ಸಂಜೆ 4 ಘಂಟೆಗೆ ಮುಗಿಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಕಾಂ| ಸೂರ್ಯನಾರಾಯಣರಾವ್ ವಹಿಸಿದ್ದರು. ಆರಂಭದಲ್ಲಿ ಕಾಂ| ಶರಗಯ್ಯ ಸ್ವಾಗತ ಭಾಷಣ ಮಾಡಿದರು. ಕಾಂ| ಪಿ ಕೆ. ಸುಬ್ರಮಣಿ ಕಾಂ| ಮುನಿರೆಡ್ಡಿ ಇವರುಗಳು ಸಮ್ಮೇಳನವನ್ನು ಉದ್ದೇಶಿಸಿ ಭಾಷಣ ಮಾಡಿದರು.

ಕ್ಷೇತ್ರದ ವ್ಯಾಪ್ತಿಗೆ ಸೇರಿದ ಕೆ. ಆರ್. ಪುರಂ, ವೈಟ್ ಫೀಲ್ಡ್, ರಾಮಮೂರ್ತಿ ನಗರ, ಬಾನಸವಾಡಿ, ಎಚ್.ಎ.ಎಲ್. ಪ್ರದೇಶ ಮತ್ತು ಇತರ 66 ಹಳ್ಳಿಗಳಿಂದ 1500 ಕಾರ್ಯಕರ್ತರು ಸಮ್ಮೇಳನಕ್ಕೆ ಆಗಮಿಸಿದ್ದರು. ಸಮ್ಮೇಳನಕ್ಕೆ ಮುಸ್ಲಿಂ ಬಾಂಧವರು ಮತ್ತು ಇತರ ಅಲ್ಪ ಸಂಖ್ಯಾತ ಜನ ವಿಭಾಗಗಳಿಂದಲೂ ಕಾರ್ಯಕರ್ತರು ಆಗಮಿಸಿದ್ದರು. ಜನತಾ, ಕ್ರಾಂತಿರಂಗ ಮತ್ತು ಸಿ.ಪಿ.ಐ. ಪಕ್ಷಗಳಿಂದಲೂ ಸಹ ಪ್ರತಿನಿಧಿಗಳು ಭಾಗವಹಿಸಿದ್ದರು. ಕ್ಷೇತ್ರದ ಎಲ್ಲಾ ಭಾಗಗಳಿಂದಲೂ ಬಂದಿದ್ದ ನಾಗರೀಕರು ತಮ್ಮ ಸಮಸ್ಯೆಗಳನ್ನು ಮನವಿ ಮುಖಾಂತರ ಸಮ್ಮೇಳನದ ಅಧ್ಯಕ್ಷರಿಗೆ ಕೊಟ್ಟು ಚರ್ಚೆಯಲ್ಲಿ ಭಾಗವಹಿಸಿದ್ದರು.

ಕ್ಷೇತ್ರದ ಹಳ್ಳಿಗಳಲ್ಲಿನ ಮುಖ್ಯ ತುರ್ತು ಸಮಸ್ಯೆಯಾದ ಕುಡಿಯುವ ನೀರಿನ ಬಗ್ಗೆ ದೀರ್ಘ ಚರ್ಚೆ ನಡೆಯಿತು. ಇದರ ಅಂಗವಾಗಿ ಫೆ. 28 ರಂದು ಕ್ಷೇತ್ರದ ಎಲ್ಲಾ ಕಡೆಯಿಂದ ರೈತ-ಕಾರ್ಮಿಕರನ್ನೊಳಗೊಂಡ ಮೆರವಣಿಗೆ ಹೊರಟು ಮುಖ್ಯ ಮಂತ್ರಿಯವರಿಗೆ ಮನವಿ ಸಲ್ಲಿಸಲು ತೀರ್ಮಾನವಾಯಿತು. ಕ್ಷೇತ್ರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಂಘಟನೆಯನ್ನು ಬೆಳೆಸಲು ತೀರ್ಮಾನಿಸಲಾಯಿತು;

ಕಾಂ. ಸೂರಿ ಅವರನ್ನು ಆಯ್ಕೆ ಮಾಡಲು ತೀರ್ಮಾನ

ಜನವರಿ 27 ರಂದು ಎಸ್ಕಾರ್ಟ್ ಕಾರ್ಮಿಕ ಸಂಘದ ಸರ್ವ ಸದಸ್ಯರ ಸಭೆ ನಡೆದು ಕಾ| ಎಸ್ ಸೂರ್ಯನಾರಾಯಣರಾವ್ ಅವರನ್ನು ಗೌರವ ಸದಸ್ಯರನ್ನಾಗಿ ನೇಮಿಸಿಕೊಂಡಿತು. ಮತ್ತು ಮುಂದಿನ ಚುನಾವಣೆಯಲ್ಲಿ ಕಾಂ| ಸೂರಿಯವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಈ ಕಾರ್ಖಾನೆಯಲ್ಲಿ ಇತ್ತೀಚೆಗೆ ಐ.ಎನ್.ಟಿ.ಯು.ಸಿ.ಯ ಗೂಂಡಾ ನಾಯಕ ಎಫ್. ಎಂ. ಖಾನ್ ಮತ್ತು ಅಧಿಕೃತ ಐ ಎನ್.ಟಿ.ಯು.ಸಿ.ನಾಯಕ್ ಅಡ್ಯಂತಾಯರವರ ನಾಯಕತ್ವದಲ್ಲಿ ಮುಷ್ಕರ ನಡೆದು ನ್ಯಾಯಬಾಹಿರ ಒಪ್ಪಂದವನ್ನು ಮಾಡಿದ್ದರು. ಇದರಿಂದ ಬೇಸತ್ತಗೊಂಡ ಕಾರ್ಮಿಕರು ಸಿ ಐ ಟಿ ಯು. ನಾಯಕತ್ವವನ್ನು ಸ್ವೀಕರಿಸಿದ್ದಾರೆ.

ಬಹಿರಂಗ ಸಭೆ

ಜನವರಿ 28 ರಂದು ಯಲಹಂಕ ಟೌನ್‌ನಲ್ಲಿ ಯಲಹಂಕ ಯುವ ಕ್ರಾಂತಿಕಾರಿ ಸಂಘಟನೆಯ ಆಶ್ರಯದಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಿ. ಐ. ಟಿ. ಯು. ಅಧ್ಯಕ್ಷ ಕಾಂ| ಸೂರ್ಯನಾರಾಯಣರಾವ್ ಅವರು ವಹಿಸಿದ್ದರು. ಈ ಸಭೆಯಲ್ಲಿ ಕಾಂ| ಪಿ. ಕೆ ಸುಬ್ರಮಣಿ ಮತ್ತು ವೈಕೋ ಎಂಪ್ಲಾಯೀಸ್ ಅಸೋಸಿಯೇಶನ್‌ನ ಪ್ರಧಾನ ಕಾರ್ಯದರ್ಶಿ ಕಾಂ| ವೀರಾಸ್ವಾಮಿ ಭಾಗವಹಿಸಿದ್ದರು.

"ಇಂದಿನ ರಾಜಕೀಯ ಪರಿಸ್ಥಿತಿ ಮತ್ತು ಜನರ ಸಮಸ್ಯೆಗಳಿಗೋಸ್ಕರ ಸಾಮೂಹಿಕ ಸಂಘಟನೆಗಳು ಮತ್ತು ಹೋರಾಟ ಸಂಘಟನೆಗಳು ಅಗತ್ಯ" ಎಂದು ಕಾಂ ಸೂರಿಯವರು ತಮ್ಮ ದೀರ್ಘ ಭಾಷಣದಲ್ಲಿ ಹೇಳಿದರು.

ಸಭೆಗೆ ಸಾವಿರಾರು ಜನ ಕೈಮಗ್ಗದ ಕಾರ್ಮಿಕರು ಮತ್ತು ಇತರೆ ಕಾರ್ಮಿಕರು ಹಾಗೂ ಸಾರ್ವಜನಿಕರು ಆಗಮಿಸಿದ್ದರು. ಇತ್ತೀಚೆಗೆ ಆ ಪ್ರದೇಶದಲ್ಲಿ ಕೈಮಗ್ಗದ ಕಾರ್ಮಿಕರ ಸಂಘಟನೆ ಮತ್ತು ಎಸ್ಕಾರ್ಟ್ ಕಾರ್ಮಿಕ ಸಂಘಟನೆಯಿಂದ ಜನಸಾಮಾನ್ಯರಲ್ಲಿ ಸಿ ಐ. ಟಿ ಯು. ವಿನ ಮತ್ತು ಸಿ.ಪಿ ಐ (ಎಂ) ನ ಪ್ರಭಾವ ಹೆಚ್ಚುತ್ತಿರುವುದು ಕಂಡು ಬರುತ್ತದೆ.

ಸ್ಥಳೀಯ ಸಂಘಟನಾ ಸಮಿತಿ ರಚನೆ

ಫೆ. 6 ರಂದು ದೊಡ್ಡಕಾನಹಳ್ಳಿ ಗ್ರಾಮದಲ್ಲಿ 15 ಹಳ್ಳಿಗಳ ಸುಮಾರು 150ಕ್ಕೂ ಮೇಲ್ಪಟ್ಟ ಪ್ರತಿನಿಧಿಗಳು ಸೇರಿ ಒಂದು ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಈ ಹಳ್ಳಿಗಳಲ್ಲಿ ರೈತ ಸಂಘಟನೆ ಮತ್ತು ಯುವ ಸಂಘಟನೆ ಮಾಡಲು ತೀರ್ಮಾನಿಸಲಾಯಿತು ಹರಳೂರು ನೀರಾವರಿ ಯೋಜನೆ ಬಗ್ಗೆ ದೀರ್ಘ ಚರ್ಚೆ ನಡೆಸಿ ಅದು ಜಾರಿಯಾಗಿ ಮತ್ತು ಆ ಬಗ್ಗೆ ಹೋರಾಡಲು ತೀರ್ಮಾನಿಸಲಾಯಿತು ಸಭೆಗೆ ಕಾಂ| ಸೂರ್ಯನಾರಾಯಣರಾವ್, ಪಿ. ಕೆ. ಸುಬ್ರಮಣಿ, ವೈಕೋ ರಾಮಯ್ಯ ಮುಂತಾದವರು. ಭಾಗವಹಿಸಿದ್ದರು; ಹೆಚ್ಚಿಗೆ ಕಾರ್ಮಿಕರೇ ವಾಸಿಸುವ ಆ ಪ್ರದೇಶಗಳಲ್ಲಿ ನೀರು, ದೀಪ, ರಸ್ತೆಗಳ ಅಭಾವವಿರುವುದರಿಂದ ಆ ಬಗ್ಗೆ ಹೋರಾಡಲು ಚರ್ಚೆ ನಡೆಯಿತು.

●

ಶಿವಮೊಗ್ಗ :

ಪಕ್ಷದ ಪ್ರಾದೇಶಿಕ ಸಮಿತಿ ಸಭೆ

ತಾ|| 6-2-83ನೇ ಭಾನುವಾರ ಬೆಳಗ್ಗೆ 11 ಘಂಟೆಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪ್ರಾದೇಶಿಕ ಸಮಿತಿ ಸಭೆ ಜರುಗಿತು. ಪಕ್ಷದ ಕಾರ್ಯ ಚಟುವಟಿಕೆಗಳ ಬಗ್ಗೆ ಕಾರ್ಯದರ್ಶಿ ಕಾಂ| ಚಂದುಕುಟ್ಟಿಯವರು ವರದಿಯನ್ನು ಮಂಡಿಸಿದರು. ವರದಿಯ ಮೇಲೆ ಚರ್ಚೆಯಾದ ನಂತರ ಕೆಳಕಂಡ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿದರು :

1. ಕರ್ನಾಟಕ ರಾಜ್ಯ ವಿಧಾನ ಸಭೆ ಚುನಾವಣೆಯಲ್ಲಿ ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ ಸರ್ಕಾರದ ವಿರುದ್ಧ ಮತ ನೀಡಿ ಜನತಾ ಸರ್ಕಾರವನ್ನು ಅಧಿಕಾರಕ್ಕೆ ತಂದ ಕರ್ನಾಟಕ ರಾಜ್ಯ ಮಹಾ ಜನಗಳಿಗೆ, ಎಲ್ಲಾ ಶ್ರಮ ಜೀವಿಗಳಿಗೆ, ಈ ಸಭೆಯು ಅಭಿನಂದನೆಗಳನ್ನು ಸಲ್ಲಿಸುತ್ತದೆ. ಅದೇ ಸಮಯದಲ್ಲಿ ಕರ್ನಾಟಕ ರಾಜ್ಯದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಗಳು ಕಡಿಮೆಯಾದುದರಿಂದ ಕೋಮು ಹಾಗೂ ಪ್ರತಿಗಾಮಿ ಶಕ್ತಿಗಳು ಬೆಳೆಯುತ್ತಿರುವುದು ಒಂದು ಅಪಾಯದ ಸೂಚನೆಯಾಗಿದೆ. ಇದರ ವಿರುದ್ಧ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಒಂದುಗೂಡಿ ಹೋರಾಟ ಮಾಡುವುದು ಅತ್ಯವಶ್ಯ.

2. ಶ್ರಮಜೀವಿ ವರ್ಗಗಳ "ಮಹಾ ದಿನವಾದ" ಮೇ ಒಂದರಂದು (ಮೇದಿನ) ರಜಾ ದಿನವಾಗಿ ಘೋಷಿಸಿದ ಜನತಾ ಸರ್ಕಾರವನ್ನು ಈ ಸಭೆಯು ಅಭಿನಂದಿಸುತ್ತದೆ.

3. ಕನ್ನಡವನ್ನು ಆಡಳಿತ ಭಾಷೆಯಾಗಿ ಅಂಗೀಕರಿಸಿದ ಜನತಾ ಸರ್ಕಾರವನ್ನು ಈ ಸಭೆಯು ಅಭಿನಂದಿಸುತ್ತದೆ.

4. ಕಾಂಗ್ರೆಸ್ ಸರ್ಕಾರ ರೈತ, ಕಾರ್ಮಿಕರ ಮೇಲೆ ಹಾಕಿರುವ ಕೇಸುಗಳೆಲ್ಲಾ ವಾಪಸು ಪಡೆದ ಜನತಾ ಸರ್ಕಾರವನ್ನು ಈ ಸಭೆಯು ಅಭಿನಂಧಿಸುತ್ತದೆ.

5. ನಿತ್ಯೋಪಯೋಗ ಸಮಾನುಗಳ ಬೆಲೆ ಇಳಿಸಿ, ನ್ಯಾಯ ಬೆಲೆ ಅಂಗಡಿಗಳ ಮೂಲಕ ಸಾಮಾನ್ಯರಿಗೆ ವಿತರಣೆ ಮಾಡಬೇಕೆಂದೂ, ಹಾಗೂ ಸೌದೆ ಬೆಲೆ ಟನ್ ಒಂದಕ್ಕೆ ರೂ. 100 ಇದ್ದದ್ದು, ಕಾಂಗ್ರೆಸ್ ಸರ್ಕಾರ ರೂ. 200 ಕ್ಕೆ ಏರಿಸಿದ್ದನ್ನು ರೂ. 100ಕ್ಕೆ ಇಳಿಸಬೇಕೆಂದು ಈ ಸಭೆಯು ಜನತಾ ಸರ್ಕಾರವನ್ನು ಒತ್ತಾಯಿಸುತ್ತದೆ. ಕಾಂಗ್ರೆಸ್ ಸರ್ಕಾರದ ಕಾಲದಲ್ಲಿ ಆಗಿನ ಎಲ್ಲಾ ವಿರೋಧ ಪಕ್ಷಗಳು ಜನತಾ ಪಕ್ಷವೂ ಸೇರಿ, "ಪ್ರಗತಿಪರ ಜನತಂತ್ರ ರಂಗ"ದ ಮುಖಂಡತ್ವದಲ್ಲಿ ಅಗತ್ಯ ವಸ್ತುಗಳ ಸೌದೆ ಬೆಲೆ ಇಳಿಸಲು ಎಷ್ಟೋ ಹೋರಾಟಗಳನ್ನು ನಡೆಸಿರುವುದು ಇಲ್ಲಿ ಸ್ಮರಿಸಬಹುದು.

●

ಪ್ರದೇಶದ ಬೀಡಿ ಕೆಲಸಗಾರರ ಸಭೆ

ರಂಗನಾಡಿ ಎಕ್ಕೂರು ಪ್ರದೇಶದ (ದ.ಕ.)ದ ಬೀಡಿ ಕಾರ್ಮಿಕರ ಸಭೆಯು ತಾ|| 30-1-83 ರಂದು ಯು. ಶಿವಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಆಳಪೆ ಪ್ರದೇಶದ ಬೀಡಿ ಲೇಬರ್ ಯೂನಿಯನಿನ ಕಾರ್ಯದರ್ಶಿ ಜೆ. ಬಾಲಕೃಷ್ಣ ಶೆಟ್ಟಿ ಅವರು ದ. ಕ. ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ ಸಮಿತಿ ಸಭೆಯು ಕೈಗೊಂಡ ನಿರ್ಣಯಗಳನ್ನು ವಿವರಿಸಿ ಬೀಡಿ ಕಾರ್ಮಿಕರು ತಮ್ಮ ನ್ಯಾಯವಾದ ಬೇಡಿಕೆಗಳನ್ನು ಪಡೆಯಲು ಸಂಘಟನೆಯನ್ನು ಬಲಪಡಿಸಲು ಕರೆ ನೀಡಿದರು.

ಬೀಡಿ ಕಾರ್ಮಿಕರಿಗೆ ಸಾವಿರ ಬೀಡಿಗೆ ರೂ. 12-00ರಂತೆ ಪರಿಷ್ಕರಣ ಮಾಡಬೇಕೆಂದು ಒತ್ತಾಯಿಸುವ ಮನವಿಗೆ ಸಹಸ್ರಾರು ಸಹಿ ಸಂಗ್ರಹಿಸಿ ಕರ್ನಾಟಕ ರಾಜ್ಯ ಮುಖ್ಯ ಮಂತ್ರಿಯವರಿಗೆ ಕೊಡಲು ನಿರ್ಣಯಿಸಲಾಯಿತ್ತು.

ಪರಿಸರ

- ಉತ್ತರ ಪ್ರದೇಶದ ಇಟವಾಹ ಜಿಲ್ಲೆಯಲ್ಲಿ ರಜವೀರ ಸಿಂಗ್ ಅವರ ಪತ್ನಿ ಮತ್ತು 4 ಮಕ್ಕಳು (2 ರಿಂದ 14 ವಯಸ್ಸು) ತಂದೆ, ತಮ್ಮ, ಮತ್ತು ಅತ್ತೆ ಹೀಗೆ 8 ಜನರನ್ನು ಕುಖ್ಯಾತ ನೆಕ್ಸೆ ನಾಯಕತ್ವದ ಡಕಾಯಿತರ ಗುಂಪು ಗುಂಡಿಕ್ಕಿ ಕೊಂದಿದೆ. ರಜವೀರ್ ಸಿಂಗರ ಕುಟುಂಬ ಪದೇ ಪದೇ ರಕ್ಷಣೆಗೆ ಮನವಿ ಮಾಡಿದ್ದರೂ ಪೋಲೀಸರು ಇದನ್ನು ಕಿವಿಗೆ ಹಾಕಿಕೊಳ್ಳಲಿಲ್ಲ ಹಾಗೂ ಪಂಚಾಯಿತ ರಾಜ್ಯ ಮಂತ್ರಿ ಬಲರಾಮ್ ಸಿಂಗ್ ಯಾದವರ ಹಸ್ತಕ್ಷೇಪ ಕಂಡು ಬಂದಿದೆ ಎಂದು ಹೇಳಲಾಗಿದೆ.

  —ಇ. ಎಸ್ ಎಸ್. ಫೆ. 4

- ಹಿಂದೂ ಮುಸ್ಲಿಂ ಗಲಭೆಗಳ ಕುರಿತು ವಿರೋಧ ಪಕ್ಷಗಳು ದಾರಿಗೆಡಿಸುವ ಪ್ರಚಾರ ಮಾಡಿದ್ದರ ಫಲ ಕರ್ನಾಟಕ ರಾಜ್ಯದ ಚುನಾವಣೆಗಳಲ್ಲಿ ವ್ಯಕ್ತವಾಗಿದೆ. ಈ ಹಿಂದಿನ ಶಾಸನ ಸಭೆಯಲ್ಲಿ ಒಟ್ಟು 17 ಮಂದಿ ಶಾಸಕರಿದ್ದರೆ ಈಗ ಅವರ ಸಂಖ್ಯೆ 2ಕ್ಕೆ ಇಳಿದಿದೆ ಕರ್ನಾಟಕದ ಮುಸ್ಲಿಮರು ಈ ವಿರೋಧಿ ಪ್ರಚಾರಕ್ಕೆ ಮನಸೋತರು. ಅದರ ಪರಿಣಾಮವಾಗಿ ಈಗ ತೊಂದರೆಯಾದದ್ದು ಅವರಿಗೇ.

  —ಶ್ರೀಮತಿ ಇಂದಿರಾ ಗಾಂಧಿ
  (ದೆಹಲಿ ಚುನಾವಣಾ ಸಭೆಯಲ್ಲಿ)

- ಪೂರ್ಣ ಪ್ರಮಾಣದಲ್ಲಿ ಭ್ರಷ್ಟಚಾರ ನಿವಾರಿಸಲು ಪ್ರಧಾನಿ ಇಂದಿರಾ ರಿಂದ ಆಗದು. ಸಣ್ಣ ಪುಟ್ಟ ವರ್ಗದ ಮೇಲೆಯೇ ಆಕೆಯ ಕಣ್ಣು. ದೊಡ್ಡ ಅಧಿಕಾರಿಗಳ ಮೇಲಾಗಲಿ ಮಂತ್ರಿಗಳ ಮೇಲಾಗಲಿ ಆಕೆಯ ದೃಷ್ಟಿ ಬಿದ್ದೇ ಇಲ್ಲ.

  —ಜನಪ್ರಕಾಶ, ಗದಗ್.

- ಕರ್ನಾಟಕದಲ್ಲಿ ಅನುಸರಿಸಲಾಗುತ್ತಿರುವ ಅರಣ್ಯಾಭಿವೃದ್ಧಿ ಚಟುವಟಿಕೆಗಳು ಗ್ರಾಮೀಣ ಭಾಗದ ಬಡತನವನ್ನು ಮತ್ತಷ್ಟು ಬಡತನಕ್ಕೆ ತಳ್ಳುತ್ತಿದೆಯೆಂದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಸಾಮಾಜಿಕ ವಿಜ್ಞಾನಿಗಳ ತಂಡವೊಂದು ನಡೆಸಿರುವ ಅಧ್ಯಯನದಿಂದ ತಿಳಿದು ಬಂದಿದೆ

  ಪಿ. ಟಿ ಐ. ಫೆ. 3

Printed & Published by P. Ramachandra Rao by him on behalf of the Communist Party of India Marxist Karnataka State Committee, L-56 K V. Temple Street Sultanpet, Bangalore-560 053 Editorial and managerial office L-56, K V Temple Street, Sultanpet, B-560 053. Phone-24154, Prited at Ravee Traders, No. 8/1, J.M. Lane, Balepet Cross, Bangalore-560 053. EDITOR P. RAMACHANDRA RAO